ಸಂಪುಟ/Volume : 46
ಸಂಚಿಕೆ/Issue : 04
ಪುಟ/Pages : 12
ಬೆಲೆ/Price : ₹ 15/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಜನವರಿ 2024 ಮಾಸ ಪತ್ರಿಕೆ

**Akhila Karnataka Shikshaka Samachar | January 2024 | Monthly**



ರಾಮಾಯ ರಾಮಭದ್ರಾಯ
ರಾಮಚಂದ್ರಾಯ ವೇದಸೇ
ರಘುನಾಥಾಯ ನಾಥಾಯ
ಸೀತಾಯಾಃ ಪತಯೇ ನಮಃ

## 550 ಸಂವತ್ಸರಗಳ ನಂತರ ಸಂಕಲ್ಪ ಸಿದ್ಧಿಸಿತು

## ಹೋರಾಟ ಸಂಕಲ್ಪ - ಸಫಲ



## ಸಂಪಾದಕೀಯ

"ಭಾರತದ ಅಂತರಾತ್ಮದ ಶಕ್ತಿ ರಾಮನಾಮ" ಎನ್ನುವುದನ್ನು ಪ್ರಪಂಚಕ್ಕೆ ದೃಢವಾಗಿ ಪರಿಚಯಿಸಿದ ದಿನ 22 ಜನವರಿ 2024. ಈ ದಿನಕ್ಕಾಗಿ ಅದೆಷ್ಟೋ ರಾಮಭಕ್ತರು ಕಾಯುತ್ತಿದ್ದರು. 500 ವರ್ಷಗಳ ಹಿಂದೆ ನಡೆದ ಐತಿಹಾಸಿಕ ತಪ್ಪನ್ನು ಸರಿಪಡಿಸಲು ಸಾವಿರಾರು ರಾಷ್ಟ್ರಭಕ್ತರು ಪ್ರಾಣಾರ್ಪಣೆ ಮಾಡಬೇಕಾಯಿತು. ಭಾರತದಲ್ಲಿ ಸಂವಿಧಾನ ಕಾನೂನಿನ ಚೌಕಟ್ಟಿನಲ್ಲಿಯೇ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ಬಾಲರಾಮನ ಪ್ರಾಣಪ್ರತಿಷ್ಠಾಪನಾ ಕಾರ್ಯ ನಡೆಯಿತು. ಇಡೀ ಪ್ರಪಂಚವೇ ಬಹಳ ಕುತೂಹಲದಿಂದ ಎದುರುನೋಡುತ್ತಿದ್ದ ಕಾರ್ಯ ಆಧ್ಯಾತ್ಮಿಕ ಶಕ್ತಿಯ ನೆಲೆಗಟ್ಟಿನ ಮೇಲೆ ನಡೆದದ್ದು ವಿಶ್ವಕ್ಕೆ ಮಾದರಿಯ ಕಾರ್ಯ. ಮುಂದಿನ ದಿನಗಳಲ್ಲಿ ಅಯೋಧ್ಯೆ ಆಧ್ಯಾತ್ಮ ಶಕ್ತಿಯ ಪ್ರವಾಸಿ ಕೇಂದ್ರವಾಗಿ ರೂಪುಗೊಳ್ಳುತ್ತದೆ.

ಕನ್ನಡಿಗರು ಈ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದು 1992ರ ಕರಸೇವೆಯ ಕಾರ್ಯದಿಂದ ದೇಗುಲದ ಕಲ್ಲು ಕೆತ್ತನೆಯ ಕಾರ್ಯ, ದೇಗುಲ ನಿರ್ಮಾಣದ ಮೇಲ್ವಿಚಾರಣೆಯ ಜೊತೆಯಲ್ಲಿ ಅನೇಕ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದರು. ಇನ್ನೊಂದು ಸಂತೋಷದ ವಿಷಯವೆಂದರೆ ಕನ್ನಡಿಗ ತಯಾರಿಸಿದ ರಾಮಶಿಲಾ ಮೂರ್ತಿಯೇ ಪ್ರಾಣಪ್ರತಿಷ್ಠಾಪನೆಯಾಗಿ ಪೂಜೆಗೆ ಆಯ್ಕೆಯಾಗಿರುವುದು ಹನುಮಂತನ ನಾಡಿನವರಾಗಿರುವ ನಮಗೆಲ್ಲ ಸಂತೋಷದ ವಿಷಯ. ಈ ದೇಗುಲದ ನಿರ್ಮಾಣದಲ್ಲಿ ಭಾರತದ ಎಲ್ಲ ಭಾಗದಿಂದಲೂ ವಸ್ತುಗಳ ಬಳಕೆಯಾಗಿರುವುದು ಒಂದೇ ಭಾರತದ ಅಂತಃಶಕ್ತಿಯನ್ನು ನಮಗೆಲ್ಲ ಪರಿಚಯಿಸುತ್ತದೆ.

ಮುಂದಿನ ದಿನಗಳಲ್ಲಿ ಸಮಯದ ಅಂತರದಲ್ಲಿ ಎಲ್ಲರೂ ಅಯೋಧ್ಯೆಯಲ್ಲಿನ ಬಾಲರಾಮನ ದರ್ಶನ ಪಡೆದು ಭಾರತದ ಐತಿಹಾಸಿಕ ಪರಂಪರೆಯ ಭಾಗವಾಗಿ ನಾವೆಲ್ಲ ಎದ್ದು ನಿಲ್ಲೋಣ. ರಾಮನ ಆದರ್ಶಗಳು ನಮಗೆಲ್ಲರಿಗೂ ದಾರಿ ದೀಪಗಳಾಗಲಿ.

ನಮ್ಮ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡ ದಿನವನ್ನು ನಾವೆಲ್ಲ ಹೆಮ್ಮೆಯಿಂದ ಗಣರಾಜ್ಯೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಸಂವಿಧಾನ ರಚನಾ ಕಾರ್ಯದಲ್ಲಿ ಶ್ರಮವಹಿಸಿದ ಡಾ॥ ಬಿ.ಆರ್ ಅಂಬೇಡ್ಕರ್ ಅವರನ್ನು ಮತ್ತು ಅವರ ಜೊತೆಯಲ್ಲಿ ಈ ಕಾರ್ಯದಲ್ಲಿ ಭಾಗವಹಿಸಿದ ಎಲ್ಲ ಮಹನೀಯರನ್ನು ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಭಾರತದ ಅಖಂಡತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುವ ಹೊಣೆಗಾರಿಕೆ ನಮ್ಮೆಲ್ಲರದು ಎನ್ನುವುದನ್ನು ನೆನಪಿಸುವ ಹಬ್ಬವೇ ಪ್ರಜಾರಾಜ್ಯೋತ್ಸವ, ಈ ಸುದಿನದಂದು ಭಾರತ ಮಾತೆಗೆ ಭಾರತ ಮಾತಾಕೀ ಜೈ ಎಂದು ಗೌರವ ಸಮರ್ಪಿಸೋಣ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ರಾಮಮಂದಿರ ಇತಿಹಾಸ ಮತ್ತು ಪ್ರಸ್ತುತತೆ 3
- ಸಂಕ್ರಾಂತಿ ಸಂಭ್ರಮ 4
- ಸಂಕ್ರಾಂತಿಯ ಸಂದೇಶ 5
- ಗಣರಾಜ್ಯೋತ್ಸವದ ಅಮೃತೋತ್ಸವ 6
- ಅಮರ ಸೇನಾನಿ–ನೇತಾಜಿ 7
- ಸಂಕಲ್ಪ ದಿನಾಚರಣೆ –ಬೆಂಗಳೂರು ಉತ್ತರ ಜಿಲ್ಲೆ 11
- ಸಂಕಲ್ಪ ದಿನಾಚರಣೆ – ಕಲ್ಬುರ್ಗಿ ಜಿಲ್ಲೆ 12



# ರಾಮಮಂದಿರ ಇತಿಹಾಸ ಮತ್ತು ಪ್ರಸ್ತುತತೆ

**ಡಾ॥ ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**



ಅಯೋಧ್ಯೆ ಭಾರತದ ಪವಿತ್ರ ಕ್ಷೇತ್ರಗಳಲ್ಲಿ ಒಂದು. ಇದು ಭಗವಾನ್ ಶ್ರೀರಾಮನ ಜನ್ಮಸ್ಥಳ. ಮಹಾವಿಷ್ಣುವಿನ ಏಳನೇ ಅವತಾರವಾದ ಶ್ರೀರಾಮನ ಜನ್ಮಸ್ಥಳದ ಕಾರಣ ಅಯೋಧ್ಯೆ ಮುಕ್ತಿಯನ್ನು ಕರುಣಿಸುವ ಪಾವನನಗರಿಗಳಲ್ಲಿ ಒಂದೆನಿಸಿದೆ. ರಾಮರಾಜ್ಯದ ಕಲ್ಪನೆಯನ್ನು ಜಗತ್ತಿಗೆ ನೀಡಿದ ಪುಣ್ಯಕರ ಭೂಮಿ ಅಯೋಧ್ಯೆಯಾಗಿದೆ. ಶ್ರೀರಾಮನ ಆಳ್ವಿಕೆಯ ನಂತರ ಅಯೋಧ್ಯೆಯನ್ನು ರಾಮನ ಮಗ ಕುಶ ಉಚ್ಛ್ರಾಯ ಸ್ಥಿತಿಗೆ ತಂದದ್ದು ಈಗ ಇತಿಹಾಸ. ಸೂರ್ಯವಂಶದ ಕೊನೆಯ ರಾಜ ಬೃಹದ್ಬಲನು ಅಯೋಧ್ಯೆಯನ್ನು ತನ್ನ ಜೀವಿತಾವಧಿಯ ಕೊನೆಯವರೆಗೆ ನೋಡಿಕೊಂಡನು. ಕಾಲಾನಂತರದಲ್ಲಿ ಚಕ್ರವರ್ತಿ ವಿಕ್ರಮಾದಿತ್ಯನು ಶ್ರೀರಾಮ ಮಂದಿರವನ್ನು ಅಯೋಧ್ಯೆಯಲ್ಲಿ ನಿರ್ಮಿಸಿದನು. ಶುಂಗ ರಾಜವಂಶದ ಪುಷ್ಯಮಿತ್ರನು ಮಂದಿರದ ಜೀರ್ಣೋದ್ಧಾರ ಮಾಡಿದನು. ಗುಪ್ತ ಸಾಮ್ರಾಜ್ಯದ ಪ್ರಸಿದ್ಧ ಚಕ್ರವರ್ತಿಯಾದ 2ನೇ ಚಂದ್ರಗುಪ್ತನು ಅಯೋಧ್ಯೆಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನು. ವರಕವಿ ಕಾಳಿದಾಸ ಕೂಡ ತನ್ನ ಕಾವ್ಯದಲ್ಲಿ ಅಯೋಧ್ಯೆಯ ರಾಮ ಮಂದಿರವನ್ನು ಉಲ್ಲೇಖಿಸಿದ್ದಾನೆ. ಅನೇಕ ಸಾಮ್ರಾಟರು ಅಯೋಧ್ಯೆಯ ಪಾಲನೆ ಮಾಡಿರುವುದು ಇತಿಹಾಸದ ಕಾಲಗರ್ಭದಲ್ಲಿ ಸೇರಿಕೊಂಡಿದೆ. 5ನೇ ಶತಮಾನದಲ್ಲಿ ಅಯೋಧ್ಯೆ ಬೌದ್ಧ ಕೇಂದ್ರವಾಗಿ ಮುನ್ನೆಲೆಗೆ ಬಂದಿತ್ತು. ಜೈನ ಧರ್ಮದ ಮೊದಲ ತೀರ್ಥಂಕರ ಆದಿನಾಥ ಹಾಗೂ ಇನ್ನಿತರ ತೀರ್ಥಂಕರರು ಇಲ್ಲಿ ಜನ್ಮತಳೆದಿದ್ದಾರೆ. ಕನೋಜ್‌ನ ರಾಜ ಜಯಚಂದ್ರ ಕೂಡ ಅಯೋಧ್ಯೆಯ ಅಭಿವೃದ್ಧಿಗೆ ಶ್ರಮಿಸಿದ್ದ. ದುರಾದೃಷ್ಟವಶಾತ್ ಎರಡನೇ ಪಾಣಿಪತ್‌ನಲ್ಲಿ ಜಯಚಂದ್ರ ವೀರಗತಿ ಹೊಂದಿದ್ದರಿಂದ ವಿದೇಶಿ ಆಕ್ರಮಣಕಾರರು ಅಯೋಧ್ಯೆ, ಕಾಶಿ, ಮಥುರಾ ಮುಂತಾದ ತೀರ್ಥಕ್ಷೇತ್ರಗಳ ಮೇಲೆ ದಾಳಿ ನಡೆಸಿ ಹಿಂದೂ ದೇವಾಲಯಗಳನ್ನು ನೆಲಸಮ ಮಾಡಿದ್ದು ಅವರ ಕ್ರೌರ್ಯ ಮನೋಭಾವಕ್ಕೆ ಸಾಕ್ಷಿಯಾಗಿದೆ. 15ನೇ ಶತಮಾನದಲ್ಲಿ ಮೊಘಲರ ಪ್ರಾಬಲ್ಯ ಹೆಚ್ಚಾದಂತೆ ಬಾಬರ್ ಕ್ರಿ.ಶ. 1527ರಲ್ಲಿ ಭವ್ಯ ರಾಮಮಂದಿರವನ್ನು ನೆಲಸಮ ಮಾಡಿ ಮಸೀದಿಯನ್ನು ನಿರ್ಮಿಸಿ ಅದನ್ನು ಬಾಬರ್ ಮಸೀದಿ ಎಂದು ಕರೆದ. ಅಂದಿನಿಂದ ಇಲ್ಲಿಯವರೆಗೆ ಹಲವು ಶತಮಾನಗಳ ಸಂಘರ್ಷಕ್ಕೆ ತೆರೆಬಿದ್ದಿದೆ. ಅಲಹಬಾದ್ ಹೈಕೋರ್ಟ್ ಹಾಗೂ ಸುಪ್ರಿಂಕೋರ್ಟ್‌ನ ಆದೇಶದಂತೆ ರಾಮಜನ್ಮಭೂಮಿಯ ಉತ್ತರಾದಾಯತ್ವ ಹಿಂದೂಗಳ ಪಾಲಾಗಿದೆ. ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ವತಿಯಿಂದ ಭಾರತದ ಸನ್ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರಮೋದಿಯವರು ಆಗಸ್ಟ್ 5, 2020ರಂದು ಭೂಮಿಪೂಜೆ ಮತ್ತು ಶಿಲಾನ್ಯಾಸ ನೆರವೇರಿಸಿದ್ದರು. ರಾಮಮಂದಿರದ ಮೂಲ ವಿನ್ಯಾಸವನ್ನು ಅಹಮದಾಬಾದ್‌ನ ಸೋಂಪುರ ಕುಟುಂಬ ಸಿದ್ಧಪಡಿಸಿದೆ. ಅದರಂತೆ ಶ್ರೀರಾಮ ಮಂದಿರ 235 ಅಡಿ ಅಗಲ 360 ಅಡಿ ಉದ್ದ ಮತ್ತು 161ಅಡಿ ಎತ್ತರವನ್ನು ಹೊಂದಿದೆ. ದೇಗುಲದ ಮುಖ್ಯ ವಾಸ್ತುಶಿಲ್ಪಿಗಳಾದ ಚಂದ್ರಕಾಂತ್ ಸೋಂಪುರ ಮತ್ತು ಇವರ ಪುತ್ರರಾದ ನಿಖಿಲ್ ಸೋಂಪುರ ಮತ್ತು ಆಶೀಶ್ ಸೋಂಪುರರವರು ನಾಗರಶೈಲಿಯ ವಾಸ್ತುವಿನಂತೆ ಮಂದಿರವನ್ನು ವಿನ್ಯಾಸಗೊಳಿಸಿದ್ದಾರೆ. ರಾಮಮಂದಿರ ಸಂಕೀರ್ಣದಲ್ಲಿ ಪ್ರಾರ್ಥನ ಮಂದಿರ, ರಾಮಕಥ್ ಕುಂಜ್, ವೈದಿಕ ಪಾಠಶಾಲಾ, ಸಂತನಿವಾಸ್, ಯಾತ್ರಿನಿವಾಸ್ ಮತ್ತು ಮ್ಯೂಸಿಯಂನಂತಹ ಸೌಲಭ್ಯಗಳು ನೋಡುಗರಿಗೆ ಲಭ್ಯವಾಗುತ್ತವೆ.

ಜನವರಿ 14, 2024ರಿಂದ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗುತ್ತವೆ. ಈ ದಿನ ಬಾಲರಾಮ (ರಾಮಲಲ್ಲಾ) ವಿಗ್ರಹದ ಪ್ರಾಣಪ್ರತಿಷ್ಠೆ ನೆರವೇರಿಸಲಾಗುತ್ತದೆ. ತದನಂತರ ವಿಗ್ರಹದ ಮೆರವಣಿಗೆಯನ್ನು ಮಾಡಿ ಸರಯೂ ನದಿ ತೀರಕ್ಕೆ ತರಲಾಗುತ್ತದೆ. ಮರುದಿನ ವಿಗ್ರಹವನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ನಂತರ ಜಲಾದಿವಾಸ, ಧಾನ್ಯದಿವಾಸ, ಘೃತಾದಿವಾಸ ಸ್ನಾಪನ, ನೇತ್ರಾ ಅನಾವರಣ, ಷೋಡೋಪಚಾರ ಪೂಜೆ ಮುಂತಾದ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಲಾಗುತ್ತದೆ. ಜನವರಿ 22, 2024ರಂದು ದೇವರ ಪ್ರಾಣ ಪ್ರತಿಷ್ಠೆ ಶುಭ ಸಂದರ್ಭದಲ್ಲಿ ಭಾರತದ ಹೆಮ್ಮೆಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರಮೋದಿಯವರು ಭಾಗವಹಿಸಲಿದ್ದಾರೆ. ಜನವರಿ 23ರಿಂದ 48 ದಿನಗಳ ಕಾಲ ಮಂಡಲೋತ್ಸವ (ಸಹಸ್ರ ಕಲಶಾಭಿಷೇಕ) ನೆರವೇರಿಸಲಾಗುತ್ತದೆ. ಅಯೋಧ್ಯೆಯಲ್ಲಿರುವ ರಾಮಾನಂದ ಸಂಪ್ರದಾಯದಂತೆ ದೈನಂದಿನ ಪೂಜಾ ವಿಧಿಗಳು ನೆರವೇರುತ್ತವೆ.

ಪ್ರಾಣಪ್ರತಿಷ್ಠೆ ಬಳಿಕ ಬ್ರಹ್ಮಕಲಶೋತ್ಸವ ಸಮಯದಲ್ಲಿ ಭಕ್ತಾದಿಗಳು ಸಹ ಸಹಸ್ರ ಕಲಶೋತ್ಸವ ಮಾಡಿಸಬಹುದು. ಬೆಳ್ಳಿ ಕಲಶವೊಂದರ ಅಂದಾಜು ವೆಚ್ಚ ಒಂದು ಲಕ್ಷ ರೂಗಳು. ದರ ವೆಚ್ಚದ ಹತ್ತು ಪಟ್ಟು ಹಣವನ್ನು ಸಮಾಜಸೇವೆಗೆ ಉಪಯೋಗಿಸಿರುವವರು ಹಾಗೂ ಅದಕ್ಕೆ ಸೂಕ್ತ ಆದಾಯತೆರಿಗೆ ಕಟ್ಟಿ ದಾಖಲೆ ಇದ್ದರೆ ಅದನ್ನು ನೀಡಿ ಕಲಶಾಭಿಷೇಕದಲ್ಲಿ ಭಾಗವಹಿಸಬಹುದು. ಪೂಜೆಗೆ ಬಳಸಿದ ಕಲಶವನ್ನು ಆಶೀರ್ವಾದ ರೂಪದಲ್ಲಿ ಭಕ್ತರಿಗೆ ನೀಡಲಾಗುತ್ತದೆ. ಜನವರಿ 22, 2024ರ ಪ್ರಾಣಪ್ರತಿಷ್ಠೆಯ ಶುಭ ಕಾರ್ಯಕ್ರಮಕ್ಕೆ ಪ್ರಧಾನಿ, ಸಾಧು–ಸಂತರು ಸೇರಿ 7000 ಗಣ್ಯರಿಗೆ ಆಹ್ವಾನ ನೀಡಲಾಗಿದೆ. ಈ ದಿನದಂದು ಗರ್ಭಗುಡಿ ಮತ್ತು ಪ್ರಾಣಪ್ರತಿಷ್ಠೆ ನೆರವೇರಲಿದ್ದು, ಪ್ರಾಂಗಣದಲ್ಲಿರುವ ಅಷ್ಟದೇವತೆಗಳ ಕಾರ್ಯಪೂರ್ಣಗೊಳ್ಳಬೇಕಾದರೆ ಕನಿಷ್ಠ ಎರಡು

ಪುಟ 9 ಕ್ಕೆ ➤



# ಸಂಕ್ರಾಂತಿ ಸಂಭ್ರಮ

**ವಿದ್ವಾನ್ ಡಾ॥ ವೆಂಕಟರಮಣ ದೇವರು ಭಟ್ಟ**
**ಕಾರ್ಯದರ್ಶಿಗಳು, ಕ.ರಾ.ಮಾ.ಶಿ.ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**



**"ಮೇಷಾದಿಷು ದ್ವಾದಶರಾಶಿಷು ಕ್ರಮೇಣ ಸಂಸರತ: ಸೂರ್ಯಸ್ಯ ಪೂರ್ವಸ್ಮಾತ್ ರಾಶೇ: ಉತ್ತರರಾಶೌ ಸಂಕ್ರಮಣಂ ಪ್ರವೇಶ: ಸಂಕ್ರಾಂತಿ:"**

ಸೂರ್ಯನು ಹಾಗೂ ಗ್ರಹಗಳು ಮೇಷಾದಿ ರಾಶಿಯಿಂದ ರಾಶಿಗೆ ಹೋಗಿ ಸೇರುವುದು ಸಂಕ್ರಾಂತಿ. (ಸಮ್+ಕ್ರಮು (ಪಾದವಿಕ್ಷೇಪೇ) + ಕ್ತಿನ್) ರವಿಯು ಮೇಷಾದಿ ರಾಶಿಗಳಲ್ಲಿ ಸಂಚರಿಸುವ ಕಾಲ 12 ತಿಂಗಳು. ಹಿಂದೂ ಧರ್ಮದಲ್ಲಿ ಸಂಕ್ರಾಂತಿಗೆ ಬಹಳ ಮಹತ್ವವಿದೆ. ಸಮಸ್ತ ಭಾರತೀಯರೂ ಸಂಭ್ರಮದಿಂದ ಈ ಉತ್ಸವವನ್ನು ಸಂಭ್ರಮಿಸುತ್ತಾರೆ. ಪೌರಾಣಿಕ ಮತ್ತು ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿದ ಹಬ್ಬ ಇದಾಗಿದೆ. ಅದರಲ್ಲೂ ಮಕರ ಸಂಕ್ರಮಣ ಮತ್ತು ಕರ್ಕಾಟಕ ಸಂಕ್ರಮಣಕ್ಕೆ ಇನ್ನಷ್ಟು ವಿಶೇಷಗಳಿವೆ. ಇವೆರಡು ಅಯನ ಸಂಕ್ರಾಂತಿಗಳು. ಕರ್ಕಾಟಕ ಸಂಕ್ರಾಂತಿಯಿಂದ ದಕ್ಷಿಣಾಯನ ಮತ್ತು ಮಕರ ಸಂಕ್ರಾಂತಿಯಿಂದ ಉತ್ತರಾಯಣ ಪ್ರಾರಂಭವಾಗುತ್ತದೆ. ಇಡೀ ಉತ್ತರಾಯಣವೇ ದೇವತೆಗಳಿಗೆ ಪ್ರಿಯವಾದದ್ದಾಗಿದೆ. ದೇವತಾ ಕಾರ್ಯಗಳಿಗೆ, ಶುಭಕಾರ್ಯಗಳಿಗೆ ಸೂಕ್ತವಾದ, ಮಂಗಳಕರವಾದ ಸಮಯ ಉತ್ತರಾಯಣ. ಮಕರ ಸಂಕ್ರಾಂತಿಯು ಖಗೋಳಶಾಸ್ತ್ರೀಯ ಮಹತ್ವವನ್ನು ಹೊಂದಿದ್ದು ಈ ಹಬ್ಬವನ್ನು ಜ್ಯೋತಿಷ್ಯದ ಆಧಾರದ ಮೇಲೆ ಸೌರ ಚಕ್ರಗಳ ಆಧಾರದ ಮೇಲೆ ಆಚರಿಸಲಾಗುತ್ತದೆ. ಆರು ತಿಂಗಳಕಾಲ ಸೂರ್ಯನು ಉತ್ತರದಕಡೆಗೆ ಚಲಿಸುವ ಸಮಯ ಇದಾಗಿದೆ. ಹಿಂದೂ ಪಂಚಾಂಗದ ಪ್ರಕಾರ ಸೂರ್ಯನು ಮಕರ ರಾಶಿಗೆ ಪ್ರವೇಶಿಸುತ್ತಾನೆ. ಈ ಸಮಯದಲ್ಲಿ ಮಕರರಾಶಿಯನ್ನು ಬಹಳ ಮಂಗಳಕರ ವೆಂದು ಪರಿಗಣಿಸಲಾಗುತ್ತದೆ. ಸೂರ್ಯನಾರಾಯಣನು ದಕ್ಷಿಣದಿಂದ ಉತ್ತರ ದಿಕ್ಕಿಗೆ ಹೆಜ್ಜೆ ಇಡಲು ಪ್ರಾರಂಭಿಸುವ ಪವಿತ್ರ ಸಮಯ ವಾದುದರಿಂದ ಈ ಪರ್ವವನ್ನು ಉತ್ತರಾಯಣದ ಪುಣ್ಯಕಾಲವೆಂದು ಕರೆಯಲಾಗುತ್ತದೆ. ಸಂಕ್ರಾಂತಿಯು ಸೌರಮಾನದ ಹಬ್ಬ. ಮಕರಮಾಸದ ಪ್ರಾರಂಭದ ದಿವಸದಲ್ಲಿ ಮಕರಸಂಕ್ರಾಂತಿ ಹಬ್ಬದ ಆಚರಣೆ.

**ರವೇ: ಸಂಕ್ರಮಣಂ ರಾಶೌ ಸಂಕ್ರಾಂತಿರಿತಿ ಕಥ್ಯತೇ।**
**ಸ್ನಾನದಾನತಪ:ಶ್ರಾದ್ಧಹೋಮಾದಿಷು ಮಹಾಫಲಾ॥**

ಮಕರಸಂಕ್ರಾಂತಿಯ ದಿನ ಪವಿತ್ರನದಿಗಳಲ್ಲಿ ಸ್ನಾನಕ್ಕೆ, ದಾನಕ್ಕೆ, ಶ್ರಾದ್ಧ, ಹೋಮಾದಿಗಳಿಗೆ ಸಾಕಷ್ಟು ಮಹತ್ವವಿದೆ. ಈದಿನ ಲಕ್ಷಾಂತರ ಭಕ್ತರು ಕಾವೇರಿ, ತುಂಗಭದ್ರ, ಗಂಗಾ, ಯಮುನಾ, ಗೋದಾವರಿ, ಕೃಷ್ಣ, ಗೋದಾವರಿ, ನರ್ಮದಾ ಮುಂತಾದ ಪವಿತ್ರ ನದಿಗಳಲ್ಲಿ ಸ್ನಾನಮಾಡುತ್ತಾರೆ. ಬರೀ ದೇಹವನ್ನಷ್ಟೇ ಅಲ್ಲ, ಮನಸ್ಸನ್ನೂ ಶುದ್ಧೀಕರಿಸುವ ಸಂಕೇತವಾಗಿ ಪವಿತ್ರ ನದಿ ಸ್ನಾನಕ್ಕೆ ಮಹತ್ವವಿದೆ. ಈದಿನ ಸಾಕಷ್ಟು ಮಂದಿ ಪೂರ್ವಜರಿಗೆ ತರ್ಪಣ ಸೇರಿದಂತೆ ಹಿರಿಯರನ್ನು ಗೌರವಿಸುವ ಸೇವೆ ಮಾಡಲಾಗುತ್ತದೆ.

**ಸಂಕ್ರಾಂತೌ ಯಾನಿ ದತ್ತಾನಿ ಹವ್ಯಕವ್ಯಾನಿ ಮಾನವೈ: ।**
**ತಾನಿ ನಿತ್ಯಂ ದದಾತ್ಯರ್ಕ: ಪುನರ್ಜನ್ಮನಿ ಜನ್ಮನಿ ॥**

ಸಂಕ್ರಾಂತಿ ದಿನದಂದು ಮಾಡುವ ದಾನಕ್ಕೆ ಬಹಳ ಮಹತ್ವವಿದೆ. ಮಾನವರಿಂದ ನೀಡಲ್ಪಟ್ಟಂತಹ ಹವ್ಯ ಕವ್ಯಾದಿಗಳು ಏನಿವೆಯೋ ಅವುಗಳಿಗೆ ಭಗವಾನ್ ಸೂರ್ಯನು ಜನ್ಮಜನ್ಮಾಂತರಗಳಲ್ಲೂ ಪ್ರತಿದಿನ ಉತ್ತಮ ಫಲವನ್ನು ಕೊಡುತ್ತಾನೆ

ಸೂರ್ಯನ ಪಥ ಬದಲಾವಣೆಯ ಹಬ್ಬವಿದು. ಕರ್ನಾಟಕದಲ್ಲಿ ಸುಗ್ಗಿ ಹಬ್ಬ, ಆಂಧ್ರ, ತಮಿಳುನಾಡುಗಳಲ್ಲಿ ಪೊಂಗಲ್, ಸಂಕ್ರಾಂತಿ, ಕನು, ಭೋಗಿಹಬ್ಬ ಎಂದು, ದೆಹಲಿ ಹರಿಯಾಣ ಮುಂತಾದೆಡೆ ಸಕ್ರಾತ್, ಪಂಜಾಬಿನಲ್ಲಿ ಮಾಘಿ, ಲೋಹ್ರಿ, ಬಿಹು, ಹೀಗೆ ಭಾರತ ದೇಶದಾದ್ಯಂತ ಬೇರೆ ಬೇರೆ ಹೆಸರುಗಳಲ್ಲಿ ಈ ಹಬ್ಬ ಆಚರಿಸಲ್ಪಡುತ್ತದೆ.

ಸಂಕ್ರಾಂತಿಯ ದಿವಸ ಮಾತ್ರವಲ್ಲದೇ ಅದರ ಹಿಂದಿನ ಮತ್ತು ಮುಂದಿನ ದಿನಗಳೂ ಹಬ್ಬಗಳಾಗಿ ಆಚರಿಸಲ್ಪಡುತ್ತವೆ. ಹಿಂದಿನ ದಿನವನ್ನು ಭೋಗಿಯ ಹಬ್ಬವೆಂದು ಕರೆಯುತ್ತಾರೆ. ಸಂಕ್ರಾಂತಿಯ ಮಾರನೆಯ ದಿವಸವು ಕನೂಹಬ್ಬವೆಂದು ಪ್ರಸಿದ್ಧಿ ಪಡೆದಿದೆ. ತಮಿಳುನಾಡಿನ ಸಂಪ್ರದಾಯದವರು ಇದನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಕನೂಹಬ್ಬದ ವಿಧಿಯನ್ನು ಆಚರಿಸುವವರು ಸ್ತ್ರೀಯರು. ಇದು ಭೂತಗಳಿಗೆ ತೃಪ್ತಿಯನ್ನುಂಟುಮಾಡುವ ವಿಶೇಷವಿಧಿ. ಇದರಲ್ಲಿ ಸಂಕ್ರಾಂತಿಯ ದಿವಸ ಅಡುಗೆ ಮಾಡಿ ದೇವರಿಗೆ ನೈವೇದ್ಯಮಾಡಿ ಮಿಕ್ಕಿರುವ ಭಕ್ಷ್ಯ ಭೋಜ್ಯ ಹಣ್ಣು ಕಬ್ಬಿನಚೂರು ಇತ್ಯಾದಿಗಳನ್ನು ಮನೆಯ ಹೊರಗಡೆ ಎಲೆಗಳ ಮೇಲೆ ಇರಿಸಿ ಅವುಗಳನ್ನು ಭೂತಗಳಿಗೆ ಸಮರ್ಪಿಸುತ್ತಾರೆ. ಅಂದು ಮಧ್ಯಾಹ್ನ ಸಾಯಂಕಾಲಗಳಲ್ಲಿ ಹೆಂಗಸರು ಉಪವನಾದಿಗಳಲ್ಲಿ ಸೇರಿ ಅಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಮಾಡಿರುವ ಭಕ್ಷ್ಯ ಭೋಜ್ಯಾದಿಗಳನ್ನು ಪರಸ್ಪರವಾಗಿ ಹಂಚಿತಿನ್ನುವ ರೂಢಿಯೂ ಉಂಟು.

**ತಿಲಪ್ರದ: ಪ್ರಜಾಮಿಷ್ಟಾಂ ದೀಪದಶ್ಚಕ್ಷುರುತ್ತಮಮ್।**
**ತಿಲಪಾತ್ರಂ ಪ್ರಯಚ್ಛನ್ ವೈ ಸರ್ವಪಾಪೈ: ಪ್ರಮುಚ್ಯತೇ॥**

ಉತ್ತರಾಯಣದ ಪುಣ್ಯಕಾಲದ ದಿವಸ ಎಳ್ಳಿನ ಪಾತ್ರೆಯನ್ನು ದಾನಮಾಡಬೇಕು. ಇದರಿಂದ ಪೀಡಾಪರಿಹಾರವಾಗುತ್ತದೆ. ಪಾಪ ಪರಿಹಾರವಾಗುತ್ತದೆ.ಇಷ್ಟವಾದ ಸಂತಾನ ಪ್ರಾಪ್ತಿಯಾಗುತ್ತದೆ. ಎಳ್ಳಿನ ಸ್ಪರ್ಶದಿಂದ ಶೈಶವಕ್ಕೆ ಸಂಬಂಧಪಟ್ಟ ಪೀಡೆಗಳು ಪರಿಹಾರವಾಗುತ್ತದೆ. ಶಿಶುಗಳ ಬೆಳವಣಿಗೆಗೆ ಬೇಕಾದ ಕೇಂದ್ರಗಳು ವಿಕಾಸಗೊಳ್ಳುತ್ತವೆ. ಆದುದರಿಂದ ಮಕ್ಕಳ ಮೇಲೆ ಎಳ್ಳನ್ನು ಅಂದು ವಿಧಿಪೂರ್ವಕವಾಗಿ ಸುರಿದು ಹಿರಿಯರು ಅಶೀರ್ವದಿಸುತ್ತಾರೆ.

ಕರ್ನಾಟಕದಲ್ಲಿ ಎಳ್ಳು ಬೀರುವ ಸಂಪ್ರದಾಯ ಬಹಳ ವಿಶಿಷ್ಟವಾದುದು. 'ಎಳ್ಳುಬೆಲ್ಲ ತಿಂದು ಒಳ್ಳೆ ಮಾತಾಡಿ' ಎಂಬುದು ಪ್ರಚಲಿತದಲ್ಲಿರುವ ಮಾತು. ಚಳಿಗಾಲದ ಉತ್ತುಂಗವಾಗಿರುವುದರಿಂದ ಎಳ್ಳು ಮತ್ತು ಬೆಲ್ಲ ಆಧಾರಿತ ಸಿಹಿತಿಂಡಿಗಳನ್ನು ಸೇವಿಸುತ್ತಾರೆ. ಈ

ಪುಟ 9 ಕ್ಕೆ ➢



# ಸಂಕ್ರಾಂತಿಯ ಸಂದೇಶ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಭೂಮಿ ಸೂರ್ಯನ ಸುತ್ತ ಸುತ್ತುವಾಗ ಒಂದು ನಕ್ಷತ್ರ ರಾಶಿಯಿಂದ ಮತ್ತೊಂದಕ್ಕೆ ಜಾರುತ್ತದೆ. ಈ ರೀತಿ 12 ರಾಶಿ ಚಕ್ರವನ್ನು ಕ್ರಮಿಸುತ್ತದೆ. ಹೀಗೆ ಒಂದರಿಂದ ಮತ್ತೊಂದಕ್ಕೆ ಹೋಗುವುದನ್ನು ಸಂಕ್ರಾಂತಿ ಎನ್ನುತ್ತೇವೆ. ವಿಶೇಷವಾಗಿ ಭೂಮಿಯ ಚಲನೆ ಧನುರ್‌ರಾಶಿಯಿಂದ ಮಕರಕ್ಕೆ ಪ್ರವೇಶ ಮಾಡುವುದೇ ನಾವು ಆಚರಿಸುವ ಹಬ್ಬ "ಮಕರ ಸಂಕ್ರಾಂತಿ".

## ಮಕರ ಸಂಕ್ರಾಂತಿಯ ವಿಶೇಷ

ಮಕರ ಸಂಕ್ರಾಂತಿಯಿಂದ ಮುಂದೆ ಸೂರ್ಯನ ಕಾಂತಿಯಲ್ಲಿ ಬದಲಾವಣೆ ಆಗಿ ಹೆಚ್ಚು ಹೆಚ್ಚು ಬೆಳಕು ಭೂಮಿಯನ್ನು ತಲುಪುತ್ತದೆ. ಆರುತಿಂಗಳು ದಕ್ಷಿಣಾಯನದಲ್ಲಿದ್ದ ಭೂಮಿ ಉತ್ತರಾಯಣದತ್ತ ಚಲಿಸುತ್ತದೆ. ರಾತ್ರಿ– ಕತ್ತಲು ಕಡಿಮೆಯಾಗಿ ಹಗಲು ಬೆಳಕು ಹೆಚ್ಚುತ್ತಾ ಹೋಗುತ್ತದೆ. ನಾವು ಸೂರ್ಯಭಗವಾನನನ್ನು ಬೇಡುವುದೇ ತಮೋಸೋಮಾ ಜ್ಯೋತಿರ್ಗಮಯ' – ಕತ್ತಲಿನಿಂದ ಬೆಳಕಿನೆಡೆಗೆ ಮುನ್ನಡೆಸು ಎಂದು. ಕಾಲದಲ್ಲಿನ ವ್ಯತ್ಯಯಕ್ಕೆ ಸಂಕ್ರಾಂತಿ ಎಂದಾದರೆ ಬದಲಾವಣೆಯೇ ಸಂಕ್ರಾಂತಿಯ ಲಕ್ಷಣ. ಪ್ರಕೃತಿಯ ಬದಲಾವಣೆ 'ಸಂಕ್ರಾಂತಿ' ಮಾನವನಲ್ಲಿನ ಮಾನಸಿಕ, ಬೌದ್ಧಿಕ ಬದಲಾವಣೆ 'ಸಂಕ್ರಾಂತಿ' ರಾಷ್ಟ್ರಗಳಲ್ಲಾಗುವ ವೈಚಾರಿಕ ಬದಲಾವಣೆ 'ಸಂಕ್ರಾಂತಿ'.

ಕಳೆದ ಸಾವಿರ ವರ್ಷಗಳಲ್ಲಿ ಈ ನಮ್ಮ ಭಾರತದಲ್ಲಿ ಆಗಾಗ್ಗೆ ಕತ್ತಲು ಕವಿಯುತ್ತಿತ್ತು. ಆದರೆ ಯೋರೋ ಮಹಾಪರುಷನ ಕಾರಣದಿಂದ ಕತ್ತಲು ಸರಿದು ಬೆಳಕು ಮಾಡುತ್ತಿತ್ತು. ಮಹಮದ್‌ಬಿನ್‌ಕಾಸಿಂ, ಘಸ್ನಿ, ಘೋರಿ, ತೈಮೂರ್, ನಾದಿರ್‌ಷಹಾ, ಬಾಬರ್ ಹೀಗೆ ಕತ್ತಲನ್ನು ಕ್ರಮಿಸಿದ ಧಾಳಿಕೋರರ ಪಟ್ಟಿಯಾದರೆ, ಇದೇ ಕಾಲಕ್ಕೆ ಬೆಳಕನ್ನ ಮೂಡಿಸಿದವರಾದ ಹೇಮಚಂದ್ರ ವಿಕ್ರಮಾದಿತ್ಯ, ರಾಣಾಪ್ರತಾಪ್, ಶಿವಾಜಿ ಹಾಗೂ ಅಸಂಖ್ಯ ಹಿಂದೂ ರಾಜರು, ಸಂತರು, ಬೆಳಕಿನ ಕಿರಣ ಚಿಮ್ಮಿಸಿದರು. ಇಸ್ಲಾಂ ಆಕ್ರಮಕರಿಂದ ಇಡೀ ಆಫ್ರಿಕಾ, ಮಧ್ಯ ಏಷ್ಯಾ, ಇರಾಕ್, ಇರಾನ್, ಟರ್ಕಿಗಳು ಹಸಿರುಮಯವಾದರೆ ಭಾರತಮಾತೆ ತನ್ನ ಹೆಸರಿಗೆ ತಕ್ಕಂತೆ ಬೆಳಕಿನುಂಡೆಯಾಗಿ ಇಂದೂ ಬೆಳಗುತ್ತಿರುವಳು.

ಮುಸ್ಲಿಂ ಆಕ್ರಮಕರ ನಂತರ ಬ್ರಿಟಿಷ್‌ರ ಆಕ್ರಮಣ 200 ವರ್ಷಗಳ ಕಾಲ ನಡೆಯಿತು. ಆದರೆ ಭಾರತ ಕತ್ತಲನ್ನು ಸಹಿಸಲಿಲ್ಲ. ಬೆಳಕಿನ ಕಿರಣಗಳು ಮೂಡುತ್ತಲೇ ಇತ್ತು. 1857 ರಿಂದ 1947ರ 90 ವರ್ಷಗಳ ಕಾಲಾವಧಿಯಲ್ಲಿ ಅದೆಷ್ಟು ಹೋರಾಟ, ಬಲಿದಾನಗಳು, ಬತ್ತಿದ್ದ ಭಾರತದ ಅಂತಃಸತ್ವವನ್ನು ಅರಳಿಸಲು ವಿವೇಕಾನಂದ, ರಾಮತೀರ್ಥ, ಅರವಿಂದರಂಥ ಸಂತಶಕ್ತಿಯ ಉಗಮ ಯುವ ಸಮುದಾಯವನ್ನು ಜಾಗೃತಗೊಳಿಸಲು ಲಾಲಾಲಜಪತರಾಯ್, ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಗಾಂಧೀಜಿಯವರ ಸತತ ಪ್ರಯತ್ನ ಭಾರತೀಯರ ಅನೈಕ್ಯತೆಯೇ ಭಾರತದ ದುಃಸ್ಥಿತಿಗೆ ಕಾರಣ ಎಂದು ಕಂಡುಕೊಂಡ ಡಾ॥ ಕೇಶವ ಬಲಿರಾಮಹೆಡಗೇವಾರರು 1925ರಲ್ಲಿ ಪ್ರಾರಂಭಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ, ನೇತಾಜಿಯವರ ಆಜಾದ್ ಹಿಂದ್ ಸೇನೆ ಕ್ರಾಂತಿಕಾರಿಗಳ ಅಖಂಡ ಪ್ರಯತ್ನದ ಫಲವಾಗಿ 1947ರಲ್ಲಿ ಯೂನಿಯನ್‌ಜಾಕ್ ಮುಂದುವರಿಯುತ್ತಾಹೋಯಿತು. ಆದರೆ ನಮ್ಮ ನಾಯಕರ ಮುಸ್ಲಿಂ ತುಷ್ಟೀಕರಣದ ಫಲವಾಗಿ ಅಖಂಡ ಭಾರತ ತ್ರಿಖಂಡವಾಯಿತು. ನಮ್ಮವರೇ ನಮ್ಮನ್ನು ಆಳಿದರೂ ಮಾರ್ಕ್ಸ್, ಮೇಕಾಲೆ ಮುಸ್ಲಿಂಇಸಂನ ಕರಿನೆರಳು ನಮ್ಮ ಇತಿಹಾಸ, ಸಂಸ್ಕೃತಿ, ಪರಂಪರೆಗಳಿಗೆ ಆವರಿಸಿತ್ತು. ನಮ್ಮ ಆಡಳಿತ, ಶಿಕ್ಷಣ ಪದ್ಧತಿ ಎಲ್ಲವೂ ಈ ಮೂರು ಇಸಂಗಳ ಪ್ರಭಾವಕ್ಕೆ ಒಳಗಾಗಿತ್ತು. ಇಂದಿಗೂ ಕಳೆದ 5–6 ಪೀಳಿಗೆಗಳು ಇದರ ಪ್ರಭಾವದಿಂದಾಗಿ ಕತ್ತಲನ್ನೇ ಬೆಳಕೆಂದು ಭ್ರಮಿಸಿ ಆರಾಧಿಸುತ್ತಿದ್ದಾರೆ.

ಆದರೆ ಭಾರತಿ ಬಂಜೆಯಲ್ಲ. ಆಕೆಯ ಉದರದಿಂದ ಹುಟ್ಟಿಬಂದ ಹಿಂದುತ್ವವಾದಿ ಸಂಘಟನೆಗೆ 100 ವರ್ಷ ಆಗುತ್ತಿದೆ. ಅದರ ಪ್ರಭಾವದಿಂದಾಗಿ ಭಾರತದ ಆಗಸದಲ್ಲಿ ನವಸೂರ್ಯೋದಯವಾಗಿದೆ. ತ್ರಿವಳಿ ಇಸಂಗಳ ಕತ್ತಲು ಕರಗುತ್ತಿದೆ.

ಪ್ರತ್ಯೇಕತಾವಾದದ ಅನುಚ್ಛೇದ 370 ತೊಲಗಿತು. 550 ವರ್ಷಗಳಿಂದ ತನ್ನ ಹುಟ್ಟುಭೂಮಿಯಲ್ಲೇ ನೆಲೆಕಾಣದ ಶ್ರೀರಾಮಚಂದ್ರನಿಗೆ ಭವ್ಯ ನೆಲೆ ಸ್ಥಾಪಿತವಾಗುತ್ತಿದೆ. ಇದೇ ಭಾರತ ರಾಮಭಕ್ತರಿಗೆ ಜಾಗೃತವಾಗಿದೆ. ಕೆಲವು ನರಿಗಳು ಅಪಸ್ವರವೆತ್ತಿದರೂ ಅದು ಜೈಶ್ರೀರಾಂ ಘೋಷಣೆಯಲ್ಲಿ ಮುಳುಗಿ ಹೋಗುತ್ತಿದೆ. 'ಸಂಕ್ರಾಂತಿಯ ಸಂದೇಶವೇ ಅದು"

ದಕ್ಷಿಣಾಯನದ ಕತ್ತಲು ಶಾಶ್ವತವಲ್ಲ ಸಮಾಜ ಬೆಳಕನ್ನು ಬಯಸುತ್ತದೆ. ಬೆಳಕಿನೆಡೆಗೆ ಸಾಗುವ ಪ್ರಯತ್ನ ಮಾಡುತ್ತಲೇ ಇರುತ್ತದೆ. ಮಾಡಲೇಬೇಕು "ಚರೈವೇತಿ' ಮುನ್ನಡೆ. ನಡೆಯುತ್ತಲೇ ಇರು. ಬೆಳಕನ್ನು ಕಾಣುವವರೆಗೆ ನಡೆಯುತ್ತಿರು". ಇದೇ ಸಂಕ್ರಾಂತಿಯ ಸಂದೇಶ. ●

# ಗಣರಾಜ್ಯೋತ್ಸವದ ಅಮೃತೋತ್ಸವ






**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**


ಸಮುದ್ರ ಮಥನದಿಂದ ಅಮೃತವು ಉದ್ಭವಿಸಿದಂತೆ ಗಣರಾಜ್ಯದ ಉದಯವಾಗಿ ಈ ಎಪ್ಪತ್ತೈದನೆಯ ಅಮೃತ ವರ್ಷದಲ್ಲಿ ಭಾರತೀಯರ ಬದುಕಿನ ಜೀವನಾಡಿಯಾದ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಮಂದಿರದ ಉದ್ಘಾಟನೆಯು ನಡೆಯುತ್ತಿದೆ. ದೇಶದ ಎಲ್ಲ ಜನರ ಮನಸ್ಸಿನಲ್ಲಿರಬಹುದಾದ ಯಾವುದೇ ಬಗೆಯ ಕಲ್ಮಶಗಳು ನಾಶವಾಗಿ, ಪರಿಶುದ್ಧ ಚಿಂತನೆಗಳ, ಭಾವನೆಗಳ ಅಮೃತಸೇಚನದಿಂದ ಪವಿತ್ರರಾಗಿ ದೇಶದ ಸರ್ವತೋಮುಖ ಏಳಿಗೆಗಾಗಿ ಕಾಯಾ ವಾಚಾ ಮನಸಾ ಶ್ರಮಿಸೋಣವೆಂದು ಸಂಕಲ್ಪಮಾಡೋಣ. .ಹಾಗೆಯೇ ಈ ಶುಭ ಸಂದರ್ಭದಲ್ಲಿ ಎಲ್ಲರೂ ಪರಸ್ಪರ ಶುಭಾಶಯಗಳನ್ನು ಹಂಚಿಕೊಳ್ಳೋಣ. ನಿಜವಾಗಲೂ ಈ ವರ್ಷ ಪ್ರತಿಯೊಬ್ಬ ಭಾರತೀಯ ಪ್ರಜೆಯು ತನ್ನ ಗಣರಾಜ್ಯದ ಹಲವು ಸಾಧನೆಗಳಿಗೆ ಸಾಕ್ಷಿಯಾಗುತ್ತಿರುವುದಕ್ಕೆ ಹೆಮ್ಮೆಪಡುವಂತಾಗಿದೆ. ಪ್ರಜಾಪ್ರಭುತ್ವವಿರುವ ಜಗತ್ತಿನ ಎಲ್ಲ ದೇಶಗಳಲ್ಲಿ ಅತಿದೊಡ್ಡದೆನಿಸಿಕೊಂಡಿರುವ ಭಾರತದಲ್ಲಿ ಗಣರಾಜ್ಯ ದಿನಾಚರಣೆಯು ಮೊದಲಿನಿಂದಲೂ ತನ್ನ ವೈಶಿಷ್ಟ್ಯವನ್ನು ಸಾರುತ್ತಲೇ ಬಂದಿದೆ. ವಿವಿಧತೆಯಲ್ಲಿ ಏಕತೆಯನ್ನು ಉಳಿಸಿಕೊಂಡು ಬಹು ಸಂಸ್ಕೃತಿಯನ್ನು ಹೊಂದಿಯೂ ಪರಸ್ಪರ ಸಾಮರಸ್ಯವನ್ನು ಕಾಯ್ದುಕೊಂಡಿರುವ ಹಿರಿಮೆ ನಮ್ಮ ದೇಶದ್ದು. 'ವಿಶ್ವಗುರು' ಎಂಬ ಸ್ಥಾನವನ್ನು ಅಲಂಕರಿಸಿದ್ದ ದೇಶವು ಹಲವು ಕಾರಣಗಳಿಂದ ಆಘಾತಗಳನ್ನು ಎದುರಿಸಬೇಕಾಗಿ ಬಂದು, ಬಾಹ್ಯ ಮಾತ್ರವಲ್ಲದೆ ಆಂತರಿಕವಾಗಿಯೂ ಅಂದರೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸಾಕಷ್ಟು ತೀವ್ರವಾದ ಹಾನಿಗೆ ಗುರಿಯಾದರೂ ಸತತ ಪರಿಶ್ರಮದಿಂದ ಇಂದು ಜಗತ್ತಿನ ಮುಂಚೂಣಿಯ ದೇಶಗಳ ಸಾಲಿನಲ್ಲಿ ಮತ್ತೆ ಹೆಮ್ಮೆಯಿಂದ ತಲೆಯೆತ್ತಿ ನಿಂತಿದೆ. ಇಂತಹ ಆತ್ಮನಿರ್ಭರ ದೇಶದ ಪ್ರಜೆಗಳು ನಾವೆಂದು ಗರ್ವದಿಂದ ಹೇಳಿಕೊಳ್ಳುವಂತಾಗಿದೆ.

2024 ರ ಜನವರಿ 26 ರಂದು ನಾವು 75 ನೇ ಗಣರಾಜ್ಯ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಇದು ನಮ್ಮ ರಾಷ್ಟ್ರೀಯ ಹಬ್ಬ. ದೇಶದ ಪ್ರತಿಯೊಬ್ಬ ಪ್ರಜೆಗಣ ಪಾಲ್ಗೊಂಡು, ಸಂಭ್ರಮಿಸಬೇಕಾದ ಹಬ್ಬ. ನಾವು ಆಚರಿಸುವ ಎಲ್ಲ ಸಾಂಸ್ಕೃತಿಕ, ಪ್ರಾದೇಶಿಕ ಹಬ್ಬಗಳಿಗಿಂತಲೂ ಮಹತ್ವದ ಹಬ್ಬ. ಎಲ್ಲ ಹಬ್ಬಗಳನ್ನು ನಾವು ದೇಶದೆಲ್ಲೆಡೆ ನಮ್ಮ ನಮ್ಮ ಪ್ರಾದೇಶಿಕ ವೈಶಿಷ್ಟ್ಯಗಳಿಗನುಗುಣವಾಗಿ, ನಮ್ಮಲ್ಲಿನ ಹಲವು ಜಾತಿ, ಮತ, ಧರ್ಮಗಳಿಗೆ ತಕ್ಕಂತೆ ವರ್ಷವಿಡೀ ಆಚರಿಸಲು ಅವಕಾಶಕೊಟ್ಟಿರುವುದೇ ನಮ್ಮ ಗಣರಾಜ್ಯದ ಕೊಡುಗೆಯೆಂಬುದನ್ನು ಮರೆಯಲಾಗದು. ಆದರೆ ಈ ಗಣರಾಜ್ಯ ದಿನಾಚರಣೆಯೆಂಬ ಹಬ್ಬವನ್ನು ಮೊದಲಿನಿಂದಲೂ ಸಾರ್ವಜನಿಕ ಹಬ್ಬವನ್ನಾಗಿಸದಿರುವುದೇ ಜನರು ಇದರ ಬಗ್ಗೆ ವಿಶೇಷವಾದ ಆದರ, ಅಭಿಮಾನಗಳನ್ನು ಬೆಳೆಸಿಕೊಳ್ಳದಿರಲು ಕಾರಣ. ಇಲ್ಲಿ ಪ್ರಜಾಪ್ರಭುತ್ವದ ನಿಜವಾದ ಅರ್ಥವನ್ನು ಪ್ರತಿಯೊಬ್ಬರೂ ತಿಳಿದುಕೊಂಡರೆ ಈ ದಿನದ ಮಹತ್ವ ಅರಿವಾಗುತ್ತದೆ. ಡಾ.ಎಸ್.ರಾಧಾಕೃಷ್ಣನ್ ಹೇಳುತ್ತಾರೆ; "ಪ್ರಜಾಪ್ರಭುತ್ವ ಪದ್ಧತಿ ಎಂದರೆ ಅದು ಸರ್ಕಾರದ ಒಂದು ಪದ್ಧತಿ ಮಾತ್ರವಲ್ಲ, ಅದು ಜೀವನದ ವಿಧಾನವೂ ಹೌದು. ವ್ಯಕ್ತಿಸ್ವಾತಂತ್ರ್ಯ ಮತ್ತು ವ್ಯಕ್ತಿಗೌರವಗಳಲ್ಲಿ ಇಟ್ಟ ನಂಬಿಕೆಯೂ ಹೌದು". ಹಾಗಾಗಿ ಇದು ಮನೆ ಮನೆಯ ಪ್ರತಿಯೊಬ್ಬ ವ್ಯಕ್ತಿಯು ಸಂಭ್ರಮಿಸಬೇಕಾದ ಹಬ್ಬ.

ಪ್ರಜಾಪ್ರಭುತ್ವ ರಾಜಕೀಯ ಪದ್ಧತಿಯನ್ನು ನಮ್ಮ ದೇಶದ ಆಡಳಿತ ಪದ್ಧತಿಯನ್ನಾಗಿ ಸ್ವೀಕರಿಸಿದ ದಿನ ಜನವರಿ 26, 1950 . ಈ ದಿನವನ್ನೇ ಪ್ರತಿ ವರ್ಷದ ಜನವರಿ 26 ರಂದು ಗಣರಾಜ್ಯೋತ್ಸವವನ್ನಾಗಿ ಆಚರಿಸುತ್ತಾ ಬಂದಿದ್ದೇವೆ. 1946ರಲ್ಲಿ ಡಾ.ಬಿ.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಂವಿಧಾನ ರಚನಾ ಸಮಿತಿ ನಾಲ್ಕು ವರ್ಷಗಳ ಕಾಲ ಸರ್ವ ರೀತಿಯಿಂದಲೂ ಚಿಂತನ–ಮಂಥನ ನಡೆಸಿ, ಸಂವಿಧಾನದ ಕರಡನ್ನು ಸಿದ್ಧಪಡಿಸಿ 1948 ರ ಫೆಬ್ರವರಿ ತಿಂಗಳಲ್ಲಿ ರಾಜ್ಯ ವ್ಯವಸ್ಥಾಪಕರ ಸಭೆಗೆ ಒಪ್ಪಿಸಿತು. ಆ ಕರಡನ್ನು ಕುರಿತು ಮೂರು ಬಾರಿ ಸುದೀರ್ಘ ಚರ್ಚೆ ನಡೆದು 1949 ರ ನವೆಂಬರ್ ತಿಂಗಳ 26 ರಂದು ಅದನ್ನು ಒಪ್ಪಲಾಯಿತು. ನಂತರ ಜನವರಿ 26, 1950 ರಂದು ಅದನ್ನು ಭಾರತದ ಸಂವಿಧಾನವೆಂದು ಘೋಷಿಸಲಾಯಿತು. ಅಂದು ಗಣರಾಜ್ಯಗಳನ್ನು ಒಳಗೊಂಡ ಭಾರತ ಸಾರ್ವಭೌಮಾಧಿಕಾರವನ್ನು ಹೊಂದಿತು. ಪ್ರಜಾಪ್ರಭುತ್ವ ರಾಜಕೀಯ ಪದ್ಧತಿಯನ್ನು ನಮ್ಮ ದೇಶದ ಆಡಳಿತ ಪದ್ಧತಿಯನ್ನಾಗಿ ಸ್ವೀಕರಿಸಿದೆವು. ಅಂದಿನಿಂದಲೇ ಆ ದಿನವನ್ನು ಪ್ರತಿವರ್ಷ ಗಣರಾಜ್ಯೋತ್ಸವವೆಂದು ಆಚರಿಸುತ್ತಾ ಬಂದಿದ್ದೇವೆ.

ಗಣರಾಜ್ಯವೇ ಪ್ರಜಾರಾಜ್ಯ. ಇಲ್ಲಿ ಪ್ರಜೆಗಳೇ ಪ್ರಭುಗಳು. ಆದುದರಿಂದಲೇ ಈ ಉತ್ಸವದಲ್ಲಿ ಪ್ರತಿ ರಾಜ್ಯದ ಸಾಂಸ್ಕೃತಿಕ ಸಂಪತ್ತನ್ನು ಗುರುತಿಸಿ ಗೌರವಿಸುವ ಸಂಭ್ರಮ ನಡೆಯುವುದು. ಆಯಾ ರಾಜ್ಯಗಳಲ್ಲಿನ ಸಂಸ್ಕೃತಿ, ಅವರು ಅನುಸರಿಸುವ ಸಂಪ್ರದಾಯಗಳು, ಜನಪರ ವೈಶಿಷ್ಟ್ಯ, ಕಲಾಪ್ರತಿಭೆಗಳು ಅಲ್ಲಿನ ಐತಿಹಾಸಿಕ ಮಹತ್ವದ ಸಂಗತಿಗಳು, ನೈಸರ್ಗಿಕ

ಪುಟ 9 ಕ್ಕೆ ➤

# ಅಮರ ಸೇನಾನಿ–ನೇತಾಜಿ



**ಆರ್. ಸೀತಾಲಕ್ಷ್ಮಿ**
**ಮಾರ್ಗದರ್ಶಕರು,**
**ಕರ್ನಾಟಕ ರಾಜ್ಯ ಮಾಧ್ಯಮಿಕ**
**ಶಿಕ್ಷಕ ಸಂಘ**

ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಬ್ರಿಟಿಷರ ವಿರುದ್ಧ ಸಮರ ನಡೆಸಲು ಸುವ್ಯವಸ್ಥಿತ ಬೃಹತ್ ಸೈನ್ಯವನ್ನು ಸಜ್ಜುಗೊಳಿಸಿದ ಏಕೈಕ ಸೇನಾನಿ ನಾಯಕ ನೇತಾಜಿ ಸುಭಾಷ್ ಚಂದ್ರ ಬೋಸ್. ತಾಯ್ನಾಡನ್ನು ಮುಕ್ತಿಗೊಳಿಸಹೊರಟ ಸೇನೆಯ ಮಹಾನಾಯಕ ಸುಭಾಷ್ ಚಂದ್ರಬೋಸ್‌ರವರು ನಮ್ಮ ರಾಷ್ಟ್ರೀಯ ಸಂಘರ್ಷದಲ್ಲಿ ಛತ್ರಪತಿ ಶಿವಾಜಿಯ ನಂತರದ 'ಮಹಾಕ್ಷತ್ರಿಯ" ಎನಿಸಿದವರು. ಭಾರತದ ರಾಜಕೀಯ ಸ್ವಾತಂತ್ರ್ಯದ ಗಳಿಕೆಗಾಗಿ 1857ರಿಂದ 1947ರವರೆಗೆ ಎರಡು ಭಿನ್ನಮಾರ್ಗಗಳಲ್ಲಿ ನಿರಂತರ ಪ್ರಯತ್ನ ನಡೆಯಿತು. ಒಂದು ಸುಧಾರಕರದು, ಇನ್ನೊಂದು ಕ್ರಾಂತಿಕಾರಿಗಳದು. ಈ ಎರಡರಲ್ಲಿ ಒಂದು ಮಾರ್ಗ ಅನುಸರಿಸಿದ್ದರೆ ಸ್ವಾತಂತ್ರ್ಯ ಕನಸಾಗಿಯೇ ಉಳಿಯುತ್ತಿತ್ತು. ಈ ಎರಡೂ ಪ್ರಸ್ಥಾನಗಳನ್ನು ಅನುಸರಿಸಿದ್ದರ ಫಲವೇ ನಮಗೆ ಸ್ವಾತಂತ್ರ್ಯ ಲಭಿಸಲು ಕಾರಣ. ಎರಡೂ ಪ್ರಸ್ಥಾನಗಳಲ್ಲಿ ಒಂದನ್ನು ಗಾಂಧೀಜಿಯವರು ಮತ್ತೊಂದನ್ನು ನೇತಾಜಿ ಸುಭಾಷ್ ಚಂದ್ರಬೋಸರವರು ಅನುಸರಿಸಿದರು. ಗಾಂಧೀಜಿಯವರು ಅಹಿಂಸಾಗತಿಯ ನಿಧಾನ ಹಾಗೂ ಶಾಂತಮಾರ್ಗವನ್ನು ಅನುಸರಿಸಿ ಸ್ವಾತಂತ್ರ ಹೋರಾಟದ ಪಾಲುದಾರರಾದರೇ, ಸ್ವಾತಂತ್ರ್ಯ ಹೋರಾಟದ ಗತಿ ತೀವ್ರ ಸ್ವರೂಪದ್ದಾಗಿರಬೇಕೆಂಬುದು ಬೋಸರ ಅಭಿಪ್ರಾಯ. ಸುಭಾಷರು ಮಾತ್ರವೇ ಅಲ್ಲ ದೇಶಬಂಧು ಚಿತ್ತ ರಂಜನ್‌ದಾಸ್, ವಲ್ಲಭಾಯಿ ಪಟೇಲ್ ಮೊದಲಾದ ಅಗ್ರಗಣಿಗಳ ಚಿಂತನೆಯೂ ಇದೇ ರೀತಿ ಇತ್ತು. ಲೋಕಮಾನ್ಯ ತಿಲಕರು, ಸ್ವಾತಂತ್ರ್ಯವೀರ ಸಾರ್ವಕರರಂತೂ ಕ್ರಾಂತಿಶಾಸ್ತ್ರವನ್ನೇ ನಿರ್ಮಿಸಿದರು. ಏನೆಲ್ಲಾ ದೀರ್ಘಸಂಧಾನಗಳು ನಡೆದಾಗ್ಯೂ 1942, ಆಗಸ್ಟ್ 8 ರ "ಕ್ವಿಟ್ ಇಂಡಿಯಾ" ಮೂವ್ಮೆಂಟ್‌ನ ಗರ್ಜನೆಯಿಂದಲೇ ಸ್ವಾತಂತ್ರ ಸಮರವು ನಿರ್ಣಾಯಕ ಘಟ್ಟವನ್ನು ತಲುಪಿತ್ತು. ಸುಭಾಷ್ ಚಂದ್ರಬೋಸ್ (I.N.A- Indian National Army) ಅಭಿಯಾನವೇ ನೌಕಾಸೇನೆಯ ಬಂಡಾಯಕ್ಕೆ ಪ್ರೇರಣೆಯಾಯಿತು. ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದಿಂದಾಗಿಯೇ ಸ್ವಾತಂತ್ರ್ಯ ಬಂದಿರಬೇಕೆಂದು ಇಂದಿಗೂ ಹೇಳಲಾಗುತ್ತದೆ. ಆದರೆ ಸತ್ಯಸಂಗತಿ ಎಂದರೆ ಕ್ರಾಂತಿಕಾರಿಗಳು ಈ ಶಸ್ತ್ರಸಜ್ಜಿತ ಹೋರಾಟ ಹಾಗೂ ಸೈನ್ಯವು ಬ್ರಿಟೀಷರನ್ನು ವಿರೋಧಿಸಿದ್ದರು. ಇದು ಮೂರು ಮುಪ್ಪರಿಗೊಂಡ ಫಲವೇ ಸ್ವಾತಂತ್ರ್ಯ ಪ್ರಾಪ್ತಿ.

ಸುಭಾಷ್‌ಚಂದ್ರಬೋಸರು ಜನಿಸಿದ್ದು 1897 ಜನವರಿ 23ರಂದು ಒರಿಸ್ಸಾದ ಕಟಕ್‌ನಲ್ಲಿ. ತಂದೆ ಜಾನಕೀನಾಥಬೋಸ್, ತಾಯಿ ಪ್ರಭಾವತಿ. ಚಿಕ್ಕಂದಿನಿಂದಲೇ ಸುಭಾಷರು ಶ್ರೀರಾಮಕೃಷ್ಣಪರಮಹಂಸರು, ಸ್ವಾಮಿ ವಿವೇಕಾನಂದರ ಬಗೆಗಿನ ಮೆಚ್ಚಿಗೆ ಹಾಗೂ ಗೌರವವನ್ನು ಜೀವನಪರ್ಯಂತ ಅನುಸರಿಸಿದರು. ವಿವೇಕಾನಂದರ ಪತ್ರಗಳು ಮತ್ತು "ಕೊಲಂಬೋದಿಂದ ಆಲ್ಮೋರಾ"ಕ್ಕೆ ಉಪನ್ಯಾಸವನ್ನು ಸುಭಾಷರ 15ನೇ ವಯಸ್ಸಿನಲ್ಲಿ ಅವರ ಜೀವನವನ್ನು ಪ್ರವೇಶಿಸಿ ಕೊನೆಯ ಉಸಿರಿರುವವರೆಗೂ ಅವರಿಗೆ ಸ್ಫೂರ್ತಿ ಸ್ಥಾನವಾಗಿ ಉಳಿದರು. ಕ್ರಾಂತಿಕಾರಿ ಎಂದು ವಿಖ್ಯಾತರಾದ ಸುಭಾಷರ ಮನಸ್ಸಿನಲ್ಲಿ ಸ್ವದೇಶ, ಸ್ವ–ಸಂಸ್ಕೃತಿಗಳ ಬಗ್ಗೆ ನಿಷ್ಠೆಯನ್ನು ದೃಢಪಡಿಸಿದ ಶ್ರೇಯಸ್ಸು ಶ್ರೀ ರಾಮಕೃಷ್ಣ– ವಿವೇಕಾನಂದರಿಗೆ ಸಲ್ಲುತ್ತದೆ.

ಕಟಕ್‌ನಲ್ಲಿ ಯೋಗಾಭ್ಯಾಸ, ಏಕಾಗ್ರತೆಯ ಸಾಧನೆ ಎಲ್ಲವನ್ನು ಪ್ರಾರಂಭಿಸಿದರು. 1913ರಲ್ಲಿ ಮೆಟ್ರಿಕ್ಯೂಲೇಷನ್ ಪರೀಕ್ಷೆಯಲ್ಲಿ ಇಡೀ ವಿಶ್ವವಿದ್ಯಾಲಯಕ್ಕೆ 2ನೇ ಸ್ಥಾನ ಪಡೆದು ತೇರ್ಗಡೆಯಾದದ್ದು ವಿಶೇಷ. ಸುಭಾಷರಿಗೆ ಉದಾತ್ತವಾದ ಮೌಲ್ಯನಿಷ್ಠೆ, ಬಾಲ್ಯದಿಂದಲೇ ಅಂಕುರಗೊಂಡಿತ್ತು. ಅನುಕೂಲಸ್ಥರಾದರೂ ನೆಲದ ಮೇಲೆಯೇ ಮಲಗುತ್ತಿದ್ದರು. ತಾಯಿ ಪ್ರಭಾವತಿ ಹಾಸಿಗೆಯ ಮೇಲೆ ಮಲಗಲು ಹೇಳಿದಾಗ " ಅಮ್ಮ ನನ್ನ ಪೂರ್ವಜ ಋಷಿ ಮುನಿಗಳು ಮಲಗುತ್ತಿದ್ದುದು ಈ ನೆಲದ ಮೇಲಲ್ಲವೇ" ಎಂದು ಮರುನುಡಿಯುತ್ತಿದ್ದರು.

ಕಲ್ಕತ್ತ "ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುವ ವೇಳೆಯಲ್ಲಿ ಮಹರ್ಷಿ ಅರವಿಂದರ ಭಕ್ತರಾಗಿದ್ದರು ಮತ್ತು ಅವರ "ಆರ್ಯ" ಮಾಸಪತ್ರಿಕೆಯನ್ನು ತಪ್ಪದೇ ಓದುತ್ತಿದ್ದರು. ಅರವಿಂದರಿಂದಲೇ ಯೋಗ ಸಮನ್ವಯ ದೃಷ್ಟಿಯನ್ನು ಪಡೆದರು. ಕಾಲೇಜಿನ ವಿಷಯಗಳಿಗಿಂತ ಅವರಿಗೆ ಸಾಮಾಜಿಕ ಚಟುವಟಿಕೆ ಬಹುಪ್ರಿಯವಾಗಿತ್ತು.

ಸುಭಾಷರಿಗೆ ದೇಶ– ಸಮಾಜದೊಡನೆ ಒಳ್ಳೆಯ ತಾದ್ಯಾತ್ಮ ಬೆಳದಿತ್ತು.

ಒಂದು ಪ್ರಸಂಗ– ಕಲ್ಕತ್ತದಲ್ಲಿದ್ದ ಮನೆಯ ಮುಂದೆ ಪ್ರತಿನಿತ್ಯ ಒಬ್ಬ ಭಿಕ್ಷುಕಿ ಮುದುಕಿ ಕುಳಿತಿರುತ್ತಿದ್ದಳು. ಅವಳ ದೈನ್ಯಭಾವ, ಚಿಂದಿ ಚಿಂದಿ ಬಟ್ಟೆ ಸುಭಾಷರಿಗೆ ಬಹಳ ನೋವು ತರುತ್ತಿತ್ತು. ಇಂತಹ ಹೀನಸ್ಥಿತಿಯಲ್ಲಿರುವವರು ಸಮಾಜದಲ್ಲಿರುವಾಗ ನಾನು ಐಷಾರಾಮವಾಗಿರುವುದು ಸರಿಯೇ ಎಂಬ ಅಪರಾಧಿ ಮನೋಭಾವ ಉಕ್ಕುತ್ತಿತ್ತು. ಮನೆಯಿಂದ ಕಾಲೇಜಿಗೆ ಹೋಗಲು ಕಾಸು ಕೊಡುತ್ತಿದ್ದರು, ಕಾಲ್ನಡಿಗೆಯಲ್ಲಿ ಕಾಲೇಜಿಗೆ ಹೋಗಿ ಆ ಮಡಿಕಾಸುಗಳನ್ನು ಉಳಿಸಿ ಆ ಭಿಕ್ಷುಕಿಗೆ ಕೊಟ್ಟು ತನ್ನ ಅಪರಾಧೀ ಮನೋಭಾವವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರು.

ವಿದೇಶದಲ್ಲಿ ನೌಕರಿ ಮಾಡಲು ನನಗೆ ಇಚ್ಛೆಯಿಲ್ಲ ಕೇವಲ ಓದಿಗಾಗಿ ವಿಲಾಯಿತಿಗೆ ಹೋಗುತ್ತಿದ್ದೇನೆ. ಎಂದು ತಂದೆಗೆ ಮನವರಿಕೆ ಮಾಡಿ ಇಂಗ್ಲೆಂಡಿಗೆ ತೆರಳಿದರು. ವಿದೇಶದ ಓದಿನ ಬಗ್ಗೆ ಅವರಿಗೆ ಸ್ಪಷ್ಟ ಕಲ್ಪನೆ ಇತ್ತು. 'ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿ ರಾಷ್ಟ್ರೀಯತೆ ಕುರಿತು ಕಲ್ಪನೆ ನೀಡುವುದು ಒಳ್ಳೆಯದು. ಆರೋಗ್ಯಪೂರ್ಣವಾದ ಮಾನಸಿಕತೆ ನಮ್ಮ ದೇಶದ ಸಂಸ್ಕೃತಿಯಿಂದ ಮಾತ್ರ ಸಾಧ್ಯ. ಸಂಸ್ಕಾರ ನೀಡದೆ ಎಳೆಯ ವಯಸ್ಸಿನಲ್ಲಿಯೇ ವಿದೇಶಕ್ಕೆ ಕಳುಹಿಸಿದರೆ ಅವರು ದಾರಿ ತಪ್ಪುವುದು ನಿಶ್ಚಿತ ಎನ್ನುವ ಅಭಿಪ್ರಾಯ ಅವರದಾಗಿತ್ತು. ಒಬ್ಬ ಉತ್ತರೋತ್ತರ ಗಣ್ಯತೆ ಪಡೆದ ವೈ.ಎನ್ ಸಕ್ಥಂಕರ್ (ಮಿತ್ರ) " ಸುಭಾಷರದು ಸದಾ ಶಿಸ್ತು ಅಚ್ಚುಕಟ್ಟು, ಓದುತ್ತಿದ್ದ ಪುಸ್ತಕಗಳನ್ನು

**ಪುಟ 8 ಕ್ಕೆ ➢**

➢ ಪುಟ 7 ರಿಂದ.....

ಎಂದೂ ಎಸೆದು ಹೋದದ್ದಿಲ್ಲ. ಅವರ ಟಿಪ್ಪಣಿ ಪುಸ್ತಕಗಳೆಲ್ಲ ಸುವ್ಯವಸ್ಥಿತ, ಉಡುಗೆ ತೊಡುಗೆಗಳೂ ಅಷ್ಟೇ ಶುಭ್ರವಾದ ಇಸ್ತ್ರೀ ಬಟ್ಟೆಯನ್ನೇ ಸದಾ ಧರಿಸಿದವರು. ಭಾರತದ ಬಗ್ಗೆ ಬ್ರಿಟಿಷರಲ್ಲಿ ಗೌರವ ಮೂಡಿಸಬೇಕು ಎಂದು ಸುಭಾಷರಿಗೆ ಇದ್ದಷ್ಟು ಕಾಳಜಿಯನ್ನು ಬೇರೆ ಯಾರಲ್ಲೂ ನೋಡಿಲ್ಲ" ಎಂದು ಹೇಳುತ್ತಿದ್ದರು.

ನಾನು ಯಾವ ಸರ್ಕಾರಿ ಸೇವೆಯನ್ನು ಮಾಡಲು ಇಚ್ಛಿಸುವುದಿಲ್ಲ. ದೇಶಸೇವೆಗೆ ಜೀವನ ಮುಡಿಪಿಡುತ್ತೇನೆಂದೂ, ಸಿವಿಲ್ ಸರ್ವಿಸ್‌ನಲ್ಲಿ 4ನೆಯವರಾಗಿ ತೇರ್ಗಡೆಯಾದರೂ ಅವರು ಸರ್ವಿಸ್ ಸೇರಲಿಲ್ಲ.

ಮಾಂಡಲೇ ಸೆರೆಮನೆಯಲ್ಲಿ ಬ್ರಾಂಕೋನ್ಯು ಮನೋನೀಯದಿಂದ ತೀವ್ರ ಜರ್ಜರಿತರಾಗಿದ್ದಾಗ ಸುಭಾಷ್‌ಚಂದ್ರಬೋಸರು ಸ್ವಂತ ಖರ್ಚಿನಲ್ಲಿ ಸರ್ಕಾರದ ಷರತ್ತುಗಳಿಗೆ ಒಳಪಟ್ಟು ಹೋಗುವುದಾದರೆ ಬಿಡುಗಡೆ ಮಾಡುತ್ತೇವೆಂದು ಜೈಲಿನ ಅಧಿಕಾರಿಗಳು ತಿಳಿಸಿದಾಗ ತಂದೆ ಜಾನಕೀನಾಥರಿಗೆ ಸೆರೆಮನೆಯಿಂದಲೇ ಪತ್ರ ಬರೆಯುತ್ತಾ "ಏನೇ ಆದರೂ ಸರ್ಕಾರದ ದಾಕ್ಷಿಣ್ಯಕ್ಕೆ ಒಳಪಡಲು ನನ್ನ ಮನಸ್ಸು ಒಪ್ಪುವುದಿಲ್ಲ, ಸ್ವಾತಂತ್ರ್ಯದಂತ ಅಮೂಲ್ಯನಿಧಿಯನ್ನು ಗಳಿಸಬೇಕಾದರೆ ಸಂಕಷ್ಟಗಳನ್ನು ವೈಯುಕ್ತಿಕವಾಗಿ , ಸಾಮೂಹಿಕವಾಗಿ ಅನುಭವಿಸಲೇ ಬೇಕಾಗುತ್ತದೆ ಎಂದು ಮನಃ ಸಿದ್ಧತೆ ಮಾಡಿಕೊಂಡಿದ್ದೇನೆ. ರಾಷ್ಟ್ರದ ಸ್ಮರಣೆಯಲ್ಲಿಯೇ ನಾನು ಸಮಾಧಾನದಿಂದಿದ್ದೇನೆ. ಈ ವಿಶ್ವಾಸವೇ ನನಗೆ ಶಕ್ತಿಯನ್ನು ನೀಡಿದೆ" ಎಂದು ತಿಳಿಸುತ್ತಾರೆ.

ಸೆರೆಮನೆಯಲ್ಲಿಯೂ ಗಾಢಚಿಂತನೆ ಮಾಡಿ ಭಾರತದ ಭಾವಿ ಸಂವಿಧಾನದ ರಚನೆ, ವ್ಯವಸ್ಥೆ, ಸಾಮಾಜಿಕ– ಆರ್ಥಿಕ ಸ್ಥಿತಿಗಳು ಹೇಗಿರಬೇಕು ಇವುಗಳ ಬಗ್ಗೆ ಅಭಿಪ್ರಾಯವನ್ನು ಬರೆದುಕೊಂಡಿದ್ದರು.

ಸುಭಾಷರ ಒಲವು ಆಧ್ಯಾತ್ಮಿಕತೆಯ ಕಡೆಗೆ ಇದ್ದರೂ ಕೂಡ ಸ್ವಾತಂತ್ರ್ಯಾಂದೋಲನವನ್ನು ಸಮರ್ಥವಾಗಿ ಮುನ್ನಡೆಸಬಲ್ಲ ಕ್ಷಾತ್ರವೃತ್ತಿ ಅವರಿಗಿತ್ತು. 1928ರ ಕಲ್ಕತ್ತೆಯ ಭಾಷಣದಲ್ಲಿ "ಇಂದು ಭಾರತಕ್ಕೆ ಬೇಕಾಗಿರುವುದು ನಿಷ್ಕ್ರಿಯ ತತ್ವ ಜಿಜ್ಞಾಸೆ ಅಲ್ಲ. ತೀಕ್ಷ್ಣ ಕಾರ್ಯೋನ್ಮುಖ ದರ್ಶನ ದೃಢವಾದ ಆಶಾವಾದ ಬೇಕಾಗಿದೆ" ಎಂದು ಹೇಳಿದಾಗ ಅವರು ಪರಶುರಾಮನಂತೆ ಶಸ್ತ್ರ ಶಾಸ್ತ್ರ ಎರಡನ್ನೂ ಆರಾಧಿಸುತ್ತಿದ್ದರು ಎಂಬುದು ಅರಿವಾಗುತ್ತದೆ.

ಯುರೋಪ್‌ಗೆ ಹೋಗಿದ್ದ ಸುಭಾಷರು ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ಭಾರತಕ್ಕೆ ಹೋಗಲು ಸುಭಾಷರು ತೀರ್ಮಾನಿಸಿ 1936 ಮಾರ್ಚ್ 27ರಂದು ಮುಂಬೈಗೆ ಬಂದರು. ಸರ್ಕಾರ ಅವರನ್ನು ಬಂಧಿಸಿ ಅವರ ರಹದಾರಿಯನ್ನು ರದ್ದುಗೊಳಿಸಿತು. ಪುಣೆಯ ಯರವಾಡ ಜೈಲಿಗೆ ಸುಭಾಷರನ್ನು ಕಳುಹಿಸಲಾಯಿತು. ಜೈಲಿನಿಂದಲೇ ಲಕ್ನೋ ಕಾಂಗ್ರೆಸ್ ಅಧಿವೇಶನಕ್ಕೆ "ಸ್ವಾತಂತ್ರ್ಯ ಧ್ವಜ ಮುಗಿಲೆತ್ತರಕ್ಕೆ ಹಾರಾಡುತ್ತಿರಲಿ" ಎಂಬ ಸಂದೇಶವನ್ನು ಕಳುಹಿಸಿದರು. ಪುನಃ ಮೇ 20ರಂದು 'ಕುರ್ಸಿಯಾಂಗ'ನದ ಅವರ ಸಹೋದರನ ಮನೆಯಲ್ಲಿ ಗೃಹಬಂಧನದಲ್ಲಿರಿಸಿದರು. ದೇಶದಾದ್ಯಂತ ಅವರ ಬಿಡುಗಡೆಗಾಗಿ ಹರತಾಳ ನಡೆಯಿತು. ಸುಭಾಷರ ದೇಹಸ್ಥಿತಿ ಇನ್ನೂ ಹದಗೆಟ್ಟಿತು. ಬೇಷರತ್ ಆಗಿ 1937 ಮಾರ್ಚ್ 12ರಂದು ಅವರನ್ನು ಬಿಡುಗಡೆ ಮಾಡಿದರು. 5 ತಿಂಗಳ ನಂತರ ದೇಹಸ್ಥಿತಿ ಸುಧಾರಿಸಿತು. ಪುನಃ ಬೋಸರು ತಮ್ಮ ಚಟುವಟಿಕೆ ಪ್ರಾರಂಭಿಸಿದರು.

1935ರ ಶಾಸನದನ್ವಯ ಸಾರ್ವತ್ರಿಕ ಚುನಾವಣೆ ನಡೆದು ಕಾಂಗ್ರೆಸ್ ಒಂದು ಪಕ್ಷವಾಗಿ ಅಧಿಕಾರ ಗ್ರಹಣ ಸ್ಥಿತಿಗೆ ಬಂದಿತು. ಅಧಿಕಾರ ಗ್ರಹಣೆಯಾದರೆ ಪೂರ್ಣ ಸ್ವಾತಂತ್ರ್ಯಕ್ಕೆ ಬೇಕಾದ ಪೂರ್ಣ ಮಾನ್ಯತೆ ಮಾಸಬಹುದೆಂದು ನೇತಾಜಿಯವರು ಸಂಶಯ ವ್ಯಕ್ತಪಡಿಸಿದರು. 1938ರಲ್ಲಿ ವಿದೇಶಿ ಭಾರತೀಯರ ಮಾನಸಿಕತೆಯನ್ನು ತಯಾರು ಮಾಡುವ ಸಲುವಾಗಿ 2 ತಿಂಗಳು ಯುರೋಪ್ ಪ್ರವಾಸ ಕೈಗೊಂಡರು. ಇಲ್ಲಿ ಅವರ ಸ್ವಾತಂತ್ರ್ಯೋತ್ಕಟತೆಯ ಮಟ್ಟವನ್ನು ನಾವು ಗಮನಿಸಬಹುದು.

ಕಾಂಗ್ರೆಸ್‌ನ 51ನೇ ಅಧಿವೇಶನ ಹರಿಪುರದಲ್ಲಿ ನಡೆಯಿತು. ಈ ಅಧಿವೇಶನದ ಅಧ್ಯಕ್ಷರಾಗಿದ್ದ ಸುಭಾಷರು ಇಂಗ್ಲೆಂಡಿನ ಸಾಮ್ರಾಜ್ಯಶಾಹಿಧೋರಣೆಯನ್ನು ಪ್ರಾರಂಭದಲ್ಲಿ ಪ್ರಸ್ತಾವಿಸಿ, ಈ ಧೋರಣೆ ಕಾಲಬಾಹ್ಯವಾದ್ದರಿಂದ ಅಂತಿಮ ಹಂತ ತಲುಪುತ್ತಿದೆ" ಎಂದು ತಿಳಿಸಿದರು. ಯಾರೂ ನಿರೀಕ್ಷಿಸದಿದ್ದರೂ ಭಾರತ ವಿಭಜಿತವಾದೀತು ಎಂಬ ಶಂಕೆಯನ್ನು ವ್ಯಕ್ತಪಡಿಸಿದರು. ಬ್ರಿಟಿಷರ ಒಡೆದು ಆಳುವ ತಂತ್ರಗಾರಿಕೆಯ ಬಗ್ಗೆ ತಿಳಿಹೇಳಿದರು.

ಇದೇ ರೀತಿ ಬ್ರಿಟಿಷ್ ಸರ್ಕಾರ ಐರ್ಲೆಂಡಿನಲ್ಲಿ ಪ್ರತ್ಯೇಕ ಆಲ್‌ಸ್ಟರ್ ಪ್ರಾಂತವನ್ನು ನಿರ್ಮಿಸಿದ್ದು, ಪ್ಯಾಲೆಸ್ಟೀನಿನಲ್ಲಿ ಯಹೂದ್ಯರ ಮತ್ತು ಅರಬ್ಬರ ನಡುವೆ ಬಿರುಕು ತರಲು ಯತ್ನಿಸುತ್ತಿದ್ದುದು ಇದನ್ನು ಬೋಸರು ಉಲ್ಲೇಖಿಸಿದರು. ಆದರೆ ಬೋಸರು ಆಗಬಾರದೆಂದಿದ್ದ ದೇಶ ವಿಭಜನೆ ಮುಂದಿನ ಒಂದೇ ದಶಕದಲ್ಲಿ ಆಯಿತು.

ದೇಶದ ಸರ್ವತೋಮುಖ ವಿಕಾಸಕ್ಕಾಗಿ ಸರ್ವ ಸ್ಪರ್ಶೀಯ ಕೇಂದ್ರೀಯ ಯೋಜನೆಯನ್ನು ಮನಗಂಡಿದ್ದ ಕೆಲವೇ ನಾಯಕರುಗಳಲ್ಲಿ ನೇತಾಜಿಯವರೂ ಒಬ್ಬರು. ಬಡತನ, ಅನಕ್ಷರತೆ, ಅನಾರೋಗ್ಯ ನಿರ್ಮೂಲನ ಔದ್ಯಮಿಕ ಉತ್ಪಾದನೆ ಹೆಚ್ಚಿ ಎಲ್ಲರಿಗೂ ನಿತ್ಯಾಗತ್ಯಗಳ ಪೂರೈಕೆ ಆಗಬೇಕಾದರೆ ಸಮರ್ಥ ಯೋಜನೆಯ ಮೂಲಕ ಮಾತ್ರ ಸಾಧ್ಯ. ನಮ್ಮ ಭಾವೀ ಸರ್ಕಾರ ಮೊದಲು ಮಾಡಬೇಕಾದ ಕೆಲಸವೆಂದರೆ "ಒಂದು ಸಮರ್ಥಯೋಜನಾ ಆಯೋಗದ ನೇಮಕಾತಿ" ಎಂದು ಪ್ರತಿಪಾದಿಸುತ್ತಿದ್ದರು.

"ಸುಭಾಷರನ್ನು ಬ್ರಿಟಿಷ್ ಸರ್ಕಾರ ಕಲ್ಕತ್ತೆಯಲ್ಲಿ ಗೃಹ ಬಂಧನದಲ್ಲಿ ಇರಿಸಿತ್ತು. ಅಲ್ಲಿಂದ ಅವರು ತಪ್ಪಿಸಿಕೊಂಡು ಯುರೋಪ್‌ಗೆ ಹೋಗಿದ್ದೇ ಒಂದು ರೋಚಕ ಕಥೆ.

ಸ್ವಾಮಿ ವಿವೇಕಾನಂದರನ್ನು ಬಿಟ್ಟರೆ ಒಟ್ಟಿನಲ್ಲಿ ಸುಭಾಷರು ಒತ್ತಿ ಹೇಳಿದ್ದು:–

1. ಅನ್ಯಾನ್ಯ ದೇಶಗಳಲ್ಲಿ ಭಾರತದ ಪರವಾಗಿರುವ ವಲಯಗಳೊಡನೆ ಸಂಸರ್ಕ ಬೆಳಸಬೇಕು.
2. ಪ್ರತಿಯೊಂದು ದೇಶದಲ್ಲಿಯೂ ಒಂದು ಭಾರತದ ಪರವಾದ ಪ್ರಭಾವಿ ಲಾಬಿ ಏರ್ಪಡಬೇಕು.

ದೇಶವ್ಯಾಪಿ ಚಿಂತನೆ, ಅಭಿವೃದ್ಧಿಯೋಜನೆ, ಜನಸಂಖ್ಯಾ ನಿಯಂತ್ರಣದ ಅವಶ್ಯಕತೆ, ಸಾಮಾಜಿಕ ಹಾಗೂ ಸರ್ಕಾರಿ ಕ್ಷೇತ್ರಗಳಲ್ಲಿ ತರಬೇತಿಯ ಅನಿವಾರ್ಯತೆ ಈ ರೀತಿ "ಸಾರಭೂತ" ಚಿಂತನೆಯನ್ನು ತಮ್ಮ ಭಾಷಣದಲ್ಲಿ ವ್ಯಕ್ತ ಪಡಿಸುತ್ತಿದ್ದರು.

ಭಾರತದ ಯುವ ಜನಾಂಗಕ್ಕೆ ಆದರ್ಶವಾಗಿ ನಿಲ್ಲಬಲ್ಲವರೆಂದರೆ ಸುಭಾಷ್ ಚಂದ್ರಬೋಸರು ಮಾತ್ರ.

●

ಸಂಸ್ಕೃತವನ್ನು ಕಲಿಯಿರಿ. ಅದರೊಂದಿಗೇ ಪಾಶ್ಚಾತ್ಯ ವಿಜ್ಞಾನವನ್ನೂ ಕಲಿಯಿರಿ – ಸ್ವಾಮಿ ವಿವೇಕಾನಂದ

➢ ಪುಟ 3 ರಿಂದ.....

ವರ್ಷಗಳಾದರೂ ಬೇಕಾಗಿದೆ. ಗರ್ಭಗುಡಿಯಲ್ಲಿ 43 ಅಡಿ ಎತ್ತರದ ಬಾಲರಾಮ ವಿಗ್ರಹದ ಪ್ರತಿಷ್ಠಾಪನೆ ಮಾಡಲಾಗುವುದು. ಅಂದು ಬೆಳಿಗ್ಗೆ 6.30–12.30 ಹಾಗೂ ಮಧ್ಯಾಹ್ನ 3.00–9.00 ರವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನಲೆಯಲ್ಲಿ ಜನವರಿ 22, 2024ರಂದು ರಾಷ್ಟ್ರಾದ್ಯಂತ ಮನ ಮನೆಗಳಲ್ಲಿ ರಾಮ ಪ್ರತಿಷ್ಠಾಪನೆ ಮಾಡಿ ಸುವರ್ಣ ಪುಣ್ಯ ದಿನವನ್ನು ಸಂಭ್ರಮಿಸಿ ಆಚರಿಸಬೇಕಾಗಿರುವುದು ನಮ್ಮೆಲ್ಲರ ಭಾಗ್ಯ ಎಂದು ಪರಿಭಾವಿಸಬೇಕಾಗುತ್ತದೆ.

ಶತಶತಮಾನಗಳ ಭಾರತೀಯರ ಆಧ್ಯಾತ್ಮಿಕತೆಯ ಅಸ್ಮಿತೆಯೇ ಶ್ರೀರಾಮ. ಭಾರತೀಯ ಜೀವನ ದೃಷ್ಟಿಯ ದ್ಯೋತಕವೇ ರಾಮ, "ರಾಮನೆಂದರೆ ಭಾರತ– ಭಾರತವೆಂದರೆ ರಾಮ" ರಾಮನ ಉದಾತ್ತ ಜೀವನಾದರ್ಶನಗಳೇ ಇಂದಿಗೂ ಭಾರತವನ್ನು ಮುನ್ನಡೆಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ರಾಷ್ಟ್ರದ ಜೀವಂತಿಕೆಯೇ ರಾಮ. ರಾಷ್ಟ್ರದ ಉಸಿರೇ ರಾಮ, ಭಾರತದ ಕಣ ಕಣದಲ್ಲೂ ರಾಮಭಕ್ತಿ, ಹನುಮಶಕ್ತಿ ಪರಮತತ್ವ ತುಂಬಿರುವುದರಿಂದ ರಾಷ್ಟ್ರ ಸದೃಢವಾಗಿದೆ. ಶತಮಾನಗಳ ಪರಕೀಯರ ಆಕ್ರಮಣವಾದರೂ ಸಹಿತ ರಾಷ್ಟ್ರದ ಆಧ್ಯಾತ್ಮಿಕ ಉನ್ನತಿ ಏರಿತೇ ಹೊರತು ಅಧೋಗತಿ ಆಗಲಿಲ್ಲ

ಜೈ ಶ್ರೀ ರಾಮ ನಾಮವೇ ನಮ್ಮೆಲ್ಲರ ಜಪವಾಗಲಿ, ಈ ಧೀಶಕ್ತಿಯಿಂದ ರಾಷ್ಟ್ರವನ್ನು ರಾಮರಾಜ್ಯವಾಗಿ ಮನ್ವಂತರಗೊಳಿಸೋಣ. ●

➢ ಪುಟ 4 ರಿಂದ.....

ಎರಡು ಪದಾರ್ಥಗಳಲ್ಲಿ ಪೌಷ್ಟಿಕಾಂಶ ಸಮೃದ್ಧವಾಗಿದ್ದು ದೇಹಕ್ಕೆ ಉಷ್ಣತೆಯನ್ನು ನೀಡುತ್ತವೆ. ಕಬ್ಬಿನ ಜಲ್ಲೆಯ ಗಿಣ್ಣುಗಳು ಜೀವನದ ಪರ್ವಗಳನ್ನು ಪ್ರತಿನಿಧಿಸುತ್ತವೆ. ಮಹಿಳೆಯರು, ಮಕ್ಕಳು ಮನೆ ಮನೆಗೆ ಹೋಗಿ ಕಬ್ಬಿನ ತುಂಡು, ಎಳ್ಳು ಮತ್ತು ಬೆಲ್ಲದ ಮಿಶ್ರಣ, ಸಕ್ಕರೆಯ ಅಚ್ಚುಗಳನ್ನು ನೀಡಿ ಸಂತೋಷವನ್ನು ಹಂಚಿಕೊಳ್ಳುತ್ತಾರೆ.

ಮಕರಸಂಕ್ರಮಣದ ಉತ್ಸವದಂದು ಜನರು ದೇವಾಲಯಗಳಿಗೆ ಭೇಟಿ ನೀಡುತ್ತಾರೆ. ರಂಗೋಲಿ, ಬಣ್ಣಬಣ್ಣದ ಅಲಂಕಾರ, ಹಾಡುಗಾರಿಕೆ, ನೃತ್ಯ, ಕುಸ್ತಿ, ಬಣ್ಣಬಣ್ಣದ ಗಾಳಿಪಟ ಹಾರಿಸುವುದು ಹೀಗೆ ಬಗೆಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತವೆ. ಈ ದಿನ ವಿಶೇಷವಾಗಿ ಗೋಪೂಜೆ ಮಾಡುತ್ತಾರೆ. ಕರ್ನಾಟಕದ ಮತ್ತೊಂದು ಹಳೆಯ ಆಚರಣೆಯೆಂದರೆ ರೈತರು ತಮ್ಮ ಹಸುಗಳನ್ನು ಮತ್ತು ದನಗಳನ್ನು ಚನ್ನಾಗಿ ಬಣ್ಣಬಣ್ಣದಿಂದ ಅಲಂಕರಿಸಿ, ಅವುಗಳಿಗೆ ಪ್ರಿಯವೂ ಹಿತಕರವೂ ಆದ ಹುಲ್ಲುಕಡ್ಡಿ, ಧಾನ್ಯ, ಕಾಯಿ, ಬೆಲ್ಲಗಳನ್ನು ತಿನ್ನಿಸಿ ಬೆಂಕಿಯ ಹಳ್ಳವನ್ನು ದಾಟುವಂತೆ ಮಾಡುತ್ತಾರೆ. ಇದು ಗ್ರಾಮ ಮತ್ತು ಜನರಿಗೆ ಅದೃಷ್ಟ ತಂದುಕೊಡುತ್ತದೆ ಎಂಬ ನಂಬಿಕೆ. ಈ ಪ್ರದರ್ಶನವನ್ನು ಗ್ರಾಮೀಣ ಭಾಗದಲ್ಲಿ ಕಿಚ್ಚು ಹಾಯಿಸೋದು ಎಂದು ಕರೆಯಲಾಗುತ್ತದೆ. ಈ ಹಬ್ಬದ ಸಮಯದಲ್ಲಿ ಪೊಂಗಲ್, ಕಾಯಿಸಿದ ಹಾಲು ಮತ್ತು ಸಕ್ಕರೆಯೊಂದಿಗೆ ಬೇಯಿಸಿದ ಅನ್ನವನ್ನು ಎಲ್ಲರೂ ಸಿದ್ಧಪಡಿಸಿ ಸಂತೋಷವಾಗಿ ಸವಿಯುತ್ತಾರೆ.

ಉಳಿದ ಸಂಕ್ರಾಂತಿಗಳನ್ನು ಆಚರಿಸಲು ಆಗದಿದ್ದರೂ ಕೂಡ ಈ ಸಂಕ್ರಾಂತಿಯನ್ನು ಅವಶ್ಯವಾಗಿ ಆಚರಿಸಬೇಕು. ಪವಿತ್ರಗಳಲ್ಲಿಯೂ ಪವಿತ್ರವೆಂದು ಪ್ರಸಿದ್ಧವಾಗಿರುವ ಪರ್ವ ಮಕರಸಂಕ್ರಾಂತಿ. ●

# ಅಯೋಧ್ಯೆಯ ರಾಮ

ಮರಳಿ ಬಂದಿಹನು ನೋಡು ಶ್ರೀ ರಾಮ
ಅವನೊಡನೆ ಜಾನಕೀ ಲಕ್ಷ್ಮಣ ಹನುಮ

ಫಲವಿದು ಐದುನೂರು ವರುಷಗಳ ತಪಕೆ
ನಮ್ಮ ಸನಾತನ ನಾಗರೀಕತೆಯ ನೆತ್ತರ ಗಳಿಕೆ

ಕೊನೆಯಿಂದು ಆ ಕ್ರೌರ್ಯದ ಕಹಿ ಇತಿಹಾಸಕೆ
ಸಿಹಿ ಮುನ್ನುಡಿಯು ಸನಾತನಿಯ ಸ್ವಾಭಿಮಾನಕೆ

ಈ ಶುಭ ದಿನವಾಗಲಿ ರಾಮರಾಜ್ಯದ ಪಾವಟಿಗೆ
ಈ ನಾಗರೀಕತೆಯ ಅನಂತ ಉಳಿವಿನ ದೀವಟಿಗೆ

ಅಯೋಧ್ಯೆಯಲಿ ವಿರಾಜಿಸಲು ರಾಮ್ ಲಲ್ಲಾ
ಬೇಗ ಮಥುರೆಯಲಿ ನೆಲೆಸಲಿ ಆ ನಂದಲಾಲಾ

ಸಿಂಹಾಸನವೇರಿಹನು ಸಾಕೇತ ಪುರಾಧೀಶ
ಅವನ ಸೇರ ಬರಲಿ ಬೇಗ ಆ ಕಾಶಿ ವಿಶ್ವೇಶ

ಮನಮನಗಳ ಬೆಳಗಲಿ ಶ್ರೀ ರಾಮನಾಮ
ಮನೆಮನೆಯಾಗಲಿ ಆ ರಾಮನ ಶ್ರೀಧಾಮ

– ಹೆಚ್. ಜಿ. ಧೃತಿ

# ಕಲ್ಬುರ್ಗಿ ಜಿಲ್ಲಾ ಘಟಕದ ನೂತನ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಆಯ್ಕೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಲ್ಬುರ್ಗಿ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಕೆಪಿಎಸ್‌ಅವರಾದ (ಬಿ) ಶಾಲೆಯ ಇಂಗ್ಲೀಷ್ ಭಾಷೆಯ ಶಿಕ್ಷಕ ಸಂಜೀವ ಕುಮಾರ ಪಾಟೀಲ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಆಳಂದ ತಾಲ್ಲೂಕಿನ ಗೋಳಾ (ಬಿ) ಸರ್ಕಾರಿ ಪ್ರೌಢಶಾಲೆ ವಿಜ್ಞಾನ ಶಿಕ್ಷಕ ಶ್ರೀಪಾಲ ಸು. ಭೋಗಾರ ಪಡಸಾವಳಿ ಆಯ್ಕೆಯಾಗಿದ್ದಾರೆ.

ಶಾಶ್ವತವಾದ ತುಷ್ಟೀಕರಣದ ನೀತಿಗಿಂತ ಮೂರ್ಖತೆ ಇನ್ನೊಂದಿಲ್ಲ, ಮಿತಿಯಿಲ್ಲದ ಬೇಡಿಕೆಗಳು ಹಾಗೂ ಎಂದೂ ತೃಪ್ತಿಪಡಿಸಲಾಗದ ತುಷ್ಟೀಕರಣ – ಇದೇ ಈ ನೀತಿಯ ಅಂತಿಮ ಗುರಿ. ಹಿಂಸಾಚಾರಕ್ಕೆ ಶರಣಾಗಿ ಗಳಿಸಿದ ಶಾಂತಿ ನಿಜಕ್ಕೂ ಶಾಂತಿ ಎನಿಸದು. ಅದು ಆತ್ಮಘಾತುಕತನ ಮಾತ್ರವಲ್ಲ, ಗೌರವ ಸಂಪನ್ನ ಮಾನವೀಯ ಬದುಕಿಗೆ ಅಗತ್ಯವೆನಿಸುವ ಎಲ್ಲ ಉದಾತ್ತ ಸಂಗತಿಗಳನ್ನು ಬರ್ಬರತೆಯ ಹಾಗೂ ಮೃಗೀಯ ಶಕ್ತಿಗಳ ಮುಂದೆ ಬಲಿಕೊಡುವಂತಹ ಕೃತ್ಯ ಅದು.

– ಡಾ. ಬಿ. ಆರ್. ಅಂಬೇಡ್ಕರ್

➢ ಪುಟ 6 ರಿಂದ.....

ಸಂಪತ್ತನ್ನು ಸಾರುವ ಪ್ರೇಕ್ಷಣೀಯ ಸ್ಥಳಗಳು, ದೇಶ ಭಕ್ತರ ಚರಿತ್ರೆಗಳಿಗೆ ಸಂಬಂಧಿಸಿದ ಪ್ರಮುಖ ಘಟನೆಗಳು ಎಲ್ಲವನ್ನು ಇಡೀ ದೇಶದ ಮುಂದೆ ಅನಾವರಣಗೊಳಿಸಿ ಪರಿಚಯಿಸುತ್ತಾ ಹೆಮ್ಮೆಪಡುವ ಅವಕಾಶಗಳಿಂದ ಹೆಮ್ಮೆಪಡುವ ಸಂತಸ ಹೊಂದುವ ಸುದಿನ ಈ ಗಣರಾಜ್ಯೋತ್ಸವದ ಆಚರಣೆ. ಇಲ್ಲಿ ಜಾತಿ, ಮತ, ಭೇದಕ್ಕೆ ಅವಕಾಶವಿಲ್ಲ. ಪ್ರಾದೇಶಿಕ ಭೇದಕ್ಕೆ, ಭಾಷಾಭೇದಕ್ಕೆ ಆಸ್ಪದವಿಲ್ಲ. ಎಲ್ಲರೂ ಭಾರತೀಯರು, ಒಂದೇ ಛತ್ರದ ಅಡಿಯಲ್ಲಿ ನೆಲೆಸಿರುವವರು. ಪರಸ್ಪರರನ್ನು ಗೌರವಿಸುವ ನೀತಿಸಂಹಿತೆಯನ್ನು ಸ್ವೀಕರಿಸಿ ಅದರಂತೆ ಬದುಕುತ್ತಿರುವ ನಾವೆಲ್ಲರೂ ಆ ನೀತಿಸಂಹಿತೆಯ ಗೌರವಾರ್ಥ ಆಚರಿಸುವ ಹಬ್ಬವೇ ಅಂದಿನ ವಿಶೇಷ. ಅದರಿಂದಲೇ ನಮ್ಮ ಗಣರಾಜ್ಯೋತ್ಸವದಲ್ಲಿ ದೇಶದ ವೈವಿಧ್ಯಮಯವಾದ ಎಲ್ಲ ಕ್ಷೇತ್ರಗಳ ಶ್ರೀಮಂತಿಕೆಯ ವೈಭವವನ್ನು ಕಾಣುವ ಸದವಕಾಶ ಎಲ್ಲರಿಗೂ ಲಭ್ಯ.

ರಂಗು ರಂಗಿನ ಈ ಪ್ರದರ್ಶನದಲ್ಲಿ ಅದೆಷ್ಟು ಬಗೆಗಳ ಸಂಸ್ಕೃತಿಗಳು, ಅದಕ್ಕೆ ಬೇಕಾದ ವೇಷಭೂಷಣಗಳು, ಅಕ್ಷರಸ್ಥ, ಅನಕ್ಷರಸ್ಥ ಕಲಾವಿದರ ಪ್ರತಿಭಾಪ್ರದರ್ಶನಗಳು, ಸಾಹಸದ ಪ್ರದರ್ಶನಗಳು, ಮಾತ್ರವಲ್ಲದೆ ದೇಶಭಕ್ತರು ದೇಶದುದ್ದಕ್ಕೂ ಇದ್ದರೆಂಬುದನ್ನು ಸಾರುವ ಸ್ತಬ್ಧಚಿತ್ರಗಳು ನಮ್ಮ ಇತಿಹಾಸದ ಹಿರಿಮೆಯನ್ನು ವಿಶ್ವದಾದ್ಯಂತ ಪರಿಚಯಿಸುತ್ತವೆ. 'ವಸುಧೈವಕುಟುಂಬಕಂ' ಎಂಬ ಆದರ್ಶವನ್ನು ಸಾರುವ, 'ಸರ್ವೇಜನಾಃಸುಖಿನೋಭವಂತು' ಎಂದು ಎಲ್ಲರ ಒಳಿತನ್ನು ಬಯಸುವವರು ನಾವೆಂಬುದನ್ನು ತಿಳಿಸುವ ಅನೇಕ ಕಥಾಸಂಗತಿಗಳ ಉದಾಹರಣೆಗಳ ಸಾಕ್ಷ್ಯರೂಪಗಳನ್ನು ತೋರುವ ದೃಶ್ಯಗಳು ಎಲ್ಲವೂ ಅಂದು ಇಡೀ ಉತ್ಸವದ ಕೇಂದ್ರಬಿಂದುವಾಗಿರುತ್ತದೆ.

ಇದು ಗಣರಾಜ್ಯಗಳ ಉತ್ಸವ. ಹಾಗಾಗಿ ಇದು ಇಡೀ ದೇಶದ ಹಬ್ಬವೆನಿಸಿಕೊಳ್ಳುತ್ತದೆ. ವಿದೇಶದ ಅತಿಥಿಗಣ್ಯರನ್ನು ಅತಿಥಿಗಳಾಗಿ ಆಹ್ವಾನಿಸಿ ಅವರೆದುರಿಗೆ ನಮ್ಮ ಈ ಎಲ್ಲ ವೈವಿಧ್ಯಮಯವಾದ ಸಂಪತ್ತನ್ನು ಪ್ರದರ್ಶಿಸುವುದರೊಂದಿಗೆ ನಮ್ಮಲ್ಲಿನ ಸುಭದ್ರ ರಕ್ಷಣಾ ವ್ಯವಸ್ಥೆಯ ವಿವಿಧ ಅಂಗಗಳು, ಆರ್ಥಿಕ ಅಭಿವೃದ್ಧಿಯ ನಿದರ್ಶನಗಳು, ನಾವೆಷ್ಟು ಬಲಿಷ್ಠರೂ ಸ್ವಾಭಿಮಾನಿಗಳೂ, ಸ್ವಾವಲಂಬಿಗಳೂ ಆಗಿದ್ದೇವೆಂದು ತಿಳಿಸುವ ಪ್ರದರ್ಶನಗಳನ್ನು ನಡೆಸಲಾಗುತ್ತದೆ. ಮೊದಲ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಇಂಡೋನೇಷ್ಯಾದ ಅಧ್ಯಕ್ಷ ಡಾ.ಸುಕರ್ನೋ ಮತ್ತು ಅವರ ಪತ್ನಿ ಆಗಮಿಸಿದ್ದರು. ಆಗ ರಾಷ್ಟ್ರಪತಿಗಳಾಗಿದ್ದವರು ಡಾ॥ ರಾಜೇಂದ್ರಪ್ರಸಾದರವರು ದೆಹಲಿಯ ಇರ್ವಿನ್ ಸ್ಟೇಡಿಯಂನಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದ್ದರು.

ಈ ಉತ್ಸವದಲ್ಲಿ ಮೊದಲಿಗೆ ರಾಜಪಥದಲ್ಲಿ ಭಾರತದ ರಾಷ್ಟ್ರಪತಿಗಳು ರಾಷ್ಟ್ರಧ್ವಜವನ್ನು ಹಾರಿಸುವ ಕಾರ್ಯವು ನಡೆಯುತ್ತದೆ. ನಂತರ ಸುದೀರ್ಘ ಮೆರವಣಿಗೆ ನಡೆಯುತ್ತದೆ. ಈ ದಿನ ಹಲವು ಸಾಧಕರಿಗೆ ಪದ್ಮಶ್ರೀ, ಪದ್ಮಭೂಷಣ, ಅಶೋಕಚಕ್ರ ಪ್ರಶಸ್ತಿ, ಕೀರ್ತಿಚಕ್ರ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಸಂದರ್ಭದಲ್ಲಿ ನಡೆಯುವ ಪೆರೇಡ್ ರಾಜಪಥದಿಂದ ಪ್ರಾರಂಭವಾಗಿ, ಇಂಡಿಯಾಗೇಟ್‌ವರೆಗೆ ಇರುತ್ತದೆ. ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ತಮ್ಮ ವಿವಿಧ ಪ್ರತಿಭೆಗಳ, ಸಾಹಸದ ಪ್ರದರ್ಶನವನ್ನು ತೋರುವುದರ ಮೂಲಕ ದೇಶದ ರಕ್ಷಣಾಪಡೆಗಳ ಸರ್ವತೋಮುಖ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾರೆ. ಆಕರ್ಷಕವಾದ ಪಥಸಂಚಲನದಲ್ಲಿ ಸಾವಿರಾರು ಮಂದಿ ಭಾರತೀಯರು ಶಾಲಾ ಬಾಲಕ, ಬಾಲಕಿಯರೂ ಸೇರಿದಂತೆ ಪಾಲ್ಗೊಳ್ಳುತ್ತಾರೆ. ಈ ಬಾರಿಯ ಗಣರಾಜ್ಯೋತ್ಸವಕ್ಕೆ ವಿಶೇಷ ಅತಿಥಿಯಾಗಿ ಈಜಿಪ್ಟ್ ಅಧ್ಯಕ್ಷರು ಭಾಗವಹಿಸುತ್ತಿದ್ದಾರೆ. ವರ್ಣರಂಜಿತವಾಗಿ ನಡೆಯುವ ಉತ್ಸವವನ್ನು ನೋಡಿ ಕಣ್ತುಂಬಿಕೊಳ್ಳಲು ವಿದೇಶಗಳಿಂದ ಅನೇಕ ಗಣ್ಯರು ಆಗಮಿಸುತ್ತಾರೆ. ಅಲಂಕೃತಗೊಂಡ ರಾಜಧಾನಿ ದೆಹಲಿಯಲ್ಲಿ ಮಾತ್ರವಲ್ಲದೆ ದೇಶದ ಪ್ರತಿ ನಗರ, ಗ್ರಾಮಗಳಲ್ಲಿಯೂ ಪ್ರಭಾತ ಫೇರಿಯನ್ನು ಆಯೋಜಿಸಿ, ಸರ್ಕಾರೀ ಕಟ್ಟಡಗಳು, ಶಾಲಾ ಕಾಲೇಜುಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ವೀರರನ್ನು ಗೌರವದಿಂದ ಸ್ಮರಿಸಲಾಗುತ್ತದೆ. ●

## ಓದುಗರ ಸ್ಪಂದನೆ

**ನಮ್ಮ ಹೊಸ ವರ್ಷ ಯಾವುದು ?**

**ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿದ ಭಾರತೀಯ ಸಂಸ್ಕೃತಿಯ ಬಗ್ಗೆ, ಕರ್ನಾಟಕ ಏಕೀಕರಣದ ಇತಿಹಾಸದ–ನಡೆದ ಬಂದ ದಾರಿ, ಭಾರತದ ಮುಕುಟಮಣಿ ಕಾಶ್ಮೀರ ತುಂಡಾದ ದುರಂತ ಕಥೆ ಮತ್ತು ರಾಜ್ಯದಲ್ಲಿ ಎನ್ ಈ ಪಿ ಶಿಕ್ಷಕಣ ಮುಂದುವರಿಸಲು ಕ್ಲಾಸ್ ಮತ್ತು ಮಾಸ್‌ಗಳಿಂದ ಕೋಟಿ ಸಂಗ್ರಹಿಸಲು ಕರಾಮಾಶಿಸಂ ಹಾಕಿಕೊಂಡು ಅಭಿಯಾನದ ಲೇಖನಗಳೆಲ್ಲವೂ ಅರ್ಥಪೂರ್ಣ, ವಿಶೇಷತೆಗಳಿಂದ ಕೂಡಿದ್ದವು. ಚೆನ್ನಾಗಿದ್ದವು.**

**– ಶ್ರೀಶ ಕುಲಕರ್ಣಿ, ಅಧ್ಯಕ್ಷರು, ಅಥಣಿ ತಾಲ್ಲೂಕು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

**ಪ್ರತಿ ತಿಂಗಳು ನನಗೆ ಶಿಕ್ಷಕ ಸಮಾಚಾರ ಬಂದು ತಲುಪುತ್ತಿದೆ. ಅದರಲ್ಲಿ ಬಂದಿರುವ ಎಲ್ಲಾ ಲೇಖನಗಳು ಚೆನ್ನಾಗಿವೆ. ಉತ್ತಮ ಮಾಹಿತಿಯನ್ನೊಳಗೊಂಡ ಕಾಶ್ಮೀರಕ್ಕೆ ಸಂಬಂಧಿಸಿದ ಲೇಖನ ಬಹಳ ಚೆನ್ನಾಗಿದೆ. ನಮ್ಮ ಕರ್ನಾಟಕ ಏಕೀಕರಣದ ಇತಿಹಾಸವನ್ನು ಸಂಪೂರ್ಣವಾಗಿ ಅರ್ಥೈಸುವಲ್ಲಿ ಬರಹಗಾರರು ಯಶಸ್ವಿಯಾಗಿದ್ದಾರೆ. ಈ ಪತ್ರಿಕೆಯ ಎಲ್ಲಾ ಲೇಖಕರಿಗೆ ನನ್ನ ಅಭಿನಂದನೆಗಳು. ಉತ್ತಮ ಮಾಹಿತಿಗಳೊಂದಿಗೆ ಪತ್ರಿಕೆ, ಸುಂದರ ಮುಖಪುಟದೊಂದಿಗೆ ಹೊರಬರುತ್ತಿದೆ. ಈ ಪತ್ರಿಕೆಗೆ ನನ್ನ ಚಂದಾಹಣ ಮುಗಿದಿದ್ದಲ್ಲಿ ದಯವಿಟ್ಟು ತಿಳಿಸಿ ತಕ್ಷಣವೇ ಕಳಿಸುತ್ತೇನೆ.**

**– ಮಹೇಶ್ ಬಸರಕೋಡ್, ರಾಜ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

# ಸಂಕಲ್ಪ ದಿನಾಚರಣೆ – ಬೆಂಗಳೂರು ಉತ್ತರ ಜಿಲ್ಲೆ







ದಿನಾಂಕ: 20–01–2024ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಬೆಂಗಳೂರು ಉತ್ತರ ವಲಯ–4ರ ಎಂ.ಇ.ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ನಮ್ಮ ಈ ಸನಾತನ ರಾಷ್ಟ್ರದ ಇಬ್ಬರು ಮಹಾನ್ ನಾಯಕರಾದ ಸ್ವಾಮಿ ವಿವೇಕಾನಂದರು ಹಾಗು ನೇತಾಜಿ ಸುಭಾಷ್ ಚಂದ್ರಭೋಸ್‌ರವರ ತತ್ವ, ಸಿದ್ಧಾಂತಗಳು ಮತ್ತು ಆದರ್ಶಗಳನ್ನು ಶಿಕ್ಷಕರು ಮೈಗೂಡಿಸಿಕೊಂಡು ಉತ್ತಮ ರಾಷ್ಟ್ರ ನಿರ್ಮಾಣ ಮಾಡುವ ನಿಟ್ಟಿನಲ್ಲಿ "ಸಂಕಲ್ಪ ದಿನಾಚರಣೆ" ಯನ್ನು ಎಂಇಎಸ್ ಶಿಕ್ಷಣಸಂಸ್ಥೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಅನೇಕ ಕಾರ್ಯಕರ್ತರ ಉಪಸ್ಥಿತಿಯಲ್ಲಿ ವಿಶಿಷ್ಟವಾಗಿ ಆಚರಿಸಲಾಯಿತು

ಎಂಇಎಸ್ ಸಮೂಹ ಶಿಕ್ಷಣ ಸಂಸ್ಥೆಯ ಶಿಕ್ಷಕಿ ಶ್ರೀಮತಿ ನೇತ್ರಾರವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಎಂಇಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಹರಿದಾಸ್‌ರವರು ವೇದಿಕೆಯ ಮೇಲೆ ಆಸೀನರಾದ ಗಣ್ಯರನ್ನು ಸಭೆಗೆ ಪರಿಚಯಿಸಿ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ವೇದಿಕೆಯ ಮೇಲಿನ ಗಣ್ಯರು ದೀಪಪ್ರಜ್ವಲನ ನೆರವೇರಿಸಿ ಸ್ವಾಮಿ ವಿವೇಕಾನಂದರು ಮತ್ತು ನೇತಾಜಿ ಸುಭಾಷ್‌ಚಂದ್ರ ಭೋಸರ ಭಾವ ಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಹಾಗೂ ಗ್ರಾಮಾಂತರ ಜಿಲ್ಲೆಗಳ ವಿಭಾಗ ಪ್ರಮುಖರಾದ ಶ್ರೀಯುತ ಗಂಗಪ್ಪರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಸಂಘದ ಪರಿಚಯವನ್ನು ಮಾಡಿಸಿ ಕಳೆದ 58 ವರ್ಷಗಳಿಂದ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮುಖೇನ ನಡೆಸುವ ಎಲ್ಲಾ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರಾದ ಶ್ರೀ ಜೆ.ಎಂ ಜೋಷಿಯವರು ಶಿಕ್ಷಣ–ಶಿಕ್ಷಕ– ವಿದ್ಯಾರ್ಥಿಗಳ ಸಂಯೋಜನೆಯೊಂದಿಗೆ ಸಂಘ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ ಹಾಗೂ ಶಿಕ್ಷಕರಲ್ಲಿ ತಮ್ಮ ಕರ್ತವ್ಯವನ್ನು ಜಾಗೃತಗೊಳಿಸಲು ಸಂಕಲ್ಪ ದಿನಾಚರಣೆಯನ್ನು ನಿರ್ವಹಿಸುತ್ತಿದ್ದೇವೆ ಎಂಬುದನ್ನು ತಿಳಿಸಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲಾ ಶಿಕ್ಷಕರಿಗೂ ಸಂಕಲ್ಪ ಬೋಧನೆ ಮಾಡಿಸಿದರು.

ಕಾರ್ಯಕ್ರಮದ ಮುಖ್ಯ ವಕ್ತಾರರಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್‌ರವರು ಶುದ್ಧವಾದ, ಪವಿತ್ರವಾದ, ದೂರದೃಷ್ಟಿಯಿಂದ ಶಿಕ್ಷಕರು ಸಂಕಲ್ಪ ಮಾಡಬೇಕು. ಮರ್ಯಾದಾ ಪುರುಷೋತ್ತಮ ಶ್ರೀರಾಮನನ್ನು ನೆನೆಸಿಕೊಂಡು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು, ನೇತಾಜಿ ಸುಭಾಷ್ ಚಂದ್ರಭೋಸರ ಆದರ್ಶಗಳನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿಯವರಾದ ವೃಷಭೇಂದ್ರಸ್ವಾಮಿಯವರು ಮಾತನಾಡುತ್ತಾ ಶಿಕ್ಷಕ ವೃತ್ತಿಯನ್ನು ಗೌರವಿಸಿ, ಪ್ರೋತ್ಸಾಹಿಸಲು ಸಂಕಲ್ಪ ದಿನಾಚರಣೆಯನ್ನು ಆಚರಿಸಿಕೊಂಡ ಬರಲಾಗುತ್ತಿದೆ ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ತಿಳಿಸಿಕೊಟ್ಟರು.

ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿ ಹಾಗೂ ಎಂಇಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀ ಬಿ.ಆರ್ ಹರಿದಾಸ್‌ರವರನ್ನು ಸಂಘದವತಿಯಿಂದ ಸನ್ಮಾನಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ.ಜಿ ಕೂಡಗಿರವರು ವಂದನಾರ್ಪಣೆ ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಉತ್ತಮವಾಗಿ ನಡೆಸಿಕೊಟ್ಟರು. ಸಾಮೂಹಿಕ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

– ಶ್ರೀ ಗಂಗಾಧರ ಎಂ. ವಿ., ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು, ಉತ್ತರ ವಲಯ–3



## ಮನವಿ ಪತ್ರ

ಡಾ. ಆಕಾಶ .ಎಸ್. ಮಾನ್ಯ ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ಇವರನ್ನು ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗ ಭೇಟಿ ಪ್ರೌಢಶಾಲಾ ಸಹ ಶಿಕ್ಷಕ ವೃಂದದಿಂದ ಪ್ರೌಢಶಾಲಾ ಮುಖ್ಯ ಗುರುಗಳ ಹುದ್ದೆಯ ಬಡ್ತಿ ಪ್ರಕ್ರಿಯೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಚರ್ಚಿಸಿ ಆದಷ್ಟು ಬೇಗನೆ ಪ್ರಕ್ರಿಯೆ ಪೂರ್ಣಗೊಳಿಸಲು ಕೋರಲಾಯಿತು.

ಆಯುಕ್ತರು ಸಕಾರಾತ್ಮಕವಾಗಿ ಸ್ಪಂದಿಸಿದರು. ಈ ಸಂದರ್ಭದಲ್ಲಿ ನಿಕಟಪೂರ್ವ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಮರನಾಥ ಪಾಟೀಲ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯದರ್ಶಿ ಮಹೇಶ ಬಸರಕೋಡ, ಕಲ್ಬುರ್ಗಿ ವಿಭಾಗ ಪ್ರಮುಖ್ ಚಂದ್ರಶೇಖರ ಪಾಟೀಲ ಉಪಸ್ಥಿತರಿದ್ದರು

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-01-2024 Date of Posting 20th or 21st of every month Posted at Periodical Rate

# ಸಂಕಲ್ಪ ದಿನಾಚರಣೆ – ಕಲ್ಬುರ್ಗಿ ಜಿಲ್ಲೆ

## ಶಿಕ್ಷಕರು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು – ಸಂಪನ್ಮೂಲ ಶಿಕ್ಷಕ ಶರಣು ಬಿರಾದಾರ ಅಭಿಮತ





ನಗರದ ಅಳಂದ ರಸ್ತೆಯ ಪ್ರೇರಣ ಕೋಚಿಂಗ್ ಕ್ಲಾಸಸ್‌ನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಕಲಬುರ್ಗಿ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿಯ ಪ್ರಯುಕ್ತ ಸಂಕಲ್ಪ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಸರ್ಕಾರಿ ಪ್ರೌಢಶಾಲೆಯ ಗೋಳಾ(ಬಿ)ಯ ಇಂಗ್ಲೀಷ್ ಭಾಷಾ ಶಿಕ್ಷಕರಾದ ಶ್ರೀ ಶರಣು ಎಂ. ಬಿರಾದಾರ್ ಮಾತನಾಡುತ್ತಾ ಶಿಕ್ಷಕರು ಸತತ ಅಧ್ಯಯನಶೀಲರಾಗಿರಬೇಕು. ಜಗತ್ತಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆಗಳು ಕ್ಷಿಪ್ರಗತಿಯಲ್ಲಿ ಸಾಗಿದ್ದು ಇಂಥ ವಿಷಯಗಳನ್ನು ನಾವು ಮಕ್ಕಳಿಗೆ ತಿಳಿಸಬೇಕಾದರೆ ದಿನಪತ್ರಿಕೆಗಳು ಪುಸ್ತಕಗಳು ಓದಲೇಬೇಕಾದ ಅನಿವಾರ್ಯತೆ ಇದೆ ಎಂದರು. ಜೊತೆಗೆ ಮಹಾನ್ ವ್ಯಕ್ತಿಗಳಾದ ಸ್ವಾಮಿ ವಿವೇಕಾನಂದರ, ಡಾ. ಎ.ಪಿ.ಜೆ ಅಬ್ದುಲ್ ಕಲಾಮರ ಹಾಗೂ ಡಾಕ್ಟರ್ ಬಿ ಆರ್ ಅಂಬೇಡ್ಕರ್‌ರವರ ಸಾಧನೆಗಳು, ತತ್ವ, ಆದರ್ಶಗಳನ್ನು ಮಕ್ಕಳು ಅಳವಡಿಸಿಕೊಳ್ಳುವಂತೆ ಪ್ರೇರಣೆ ನೀಡಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಲಬುರ್ಗಿ ವಿಭಾಗ ಪ್ರಮುಖ ಚಂದ್ರಶೇಖರ್ ಪಾಟೀಲ್ ಮಾಧ್ಯಮಿಕ ಶಿಕ್ಷಕ ಸಂಘ ಪ್ರತಿ ವರ್ಷ ಈ ಸಂಕಲ್ಪ ದಿನಾಚರಣೆಯನ್ನು ಸ್ವಾಮಿ ವಿವೇಕಾನಂದರ ಜಯಂತಿಯ ಪ್ರಯುಕ್ತ ಆಚರಿಸುತ್ತಿದ್ದು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರು ಪ್ರಮುಖವಾದ ಪಾತ್ರವನ್ನು ವಹಿಸುತ್ತಾರೆ ಆದ್ದರಿಂದ ಶಿಕ್ಷಕರಲ್ಲಿ ಕರ್ತವ್ಯ ಪ್ರಜ್ಞೆ, ವೃತ್ತಿ ಗೌರವ ಹೆಚ್ಚಿಸಿಕೊಳ್ಳುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷ ಸಂಜೀವ್ ಕುಮಾರ್ ಪಾಟೀಲ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಶ್ರೀ ಶಿವಲಿಂಗಪ್ಪ ಕೂಡ್ಲಿ ವಿವೇಕಾನಂದ ಶ್ರೀಶೈಲ್ ಸಾಲಿಮಠ ಶಂಕರಲಿಂಗ ಕಲಶೆಟ್ಟಿ, ಅನಿಲ ಕುಮಾರ್, ಧೋತ್ರಿ ಪ್ರಶಾಂತ್ ಪಾಟೀಲ, ಚಂದ್ರಕಾಂತ್ ಬಿರಾದಾರ, ಚಂದ್ರಶೇಖರ್ ಗೋಸಲ ಮುಂತಾದವರು ಉಪಸ್ಥಿತರಿದ್ದರು. ರಾಜ್ಯ ಸಹ ಕಾರ್ಯದರ್ಶಿ ಅನಿಲ್ ಕುಮಾರ್ ಬಿರಾದಾರ್ ಇವರು ಶಿಕ್ಷಕರಿಗೆ ಸಂಕಲ್ಪ ಬೋಧನೆಯನ್ನು ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀಪಾಲ ಭೋಗಾರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

– **ಚಂದ್ರಶೇಖರ್ ಎಸ್ ಪಾಟೀಲ್,** ವಿಭಾಗ ಪ್ರಮುಖರು, ಕಲ್ಬುರ್ಗಿ

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**
ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com